ST ALOYSIUS
(DEEMED TO BE UNIVERSITY)
ESTD : 1880
MANGALURU, KARNATAKA 575003 - INDIA

# NEWS CLIPPINGS

## 01-08-2025 TO 15-08-2025

Udayavani 01-08-2025

## ಅಲೋಶಿಯಸ್ ವಿ.ವಿ.ಯಲ್ಲಿ ಅಂತರ್ ಕಾಲೇಜು ಅರ್ಥಶಾಸ್ತ್ರ ಉತ್ಸವ

# ಯಶಸ್ವೀ ವೃತ್ತಿಜೀವನಕ್ಕೆ ಕೌಶಲ ಅತ್ಯಗತ್ಯ: ರಿತುಪರ್ಣ



ಹುಂಡಿಗೆ ನಾಣ್ಯ ಹಾಕುವ ಮೂಲಕ ಉತ್ಸವವನ್ನು ಉದ್ಘಾಟಿಸಲಾಯಿತು.

**ಬಾವುಟಗುಡ್ಡೆ, ಜು. 31:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕಲಾ ಮತ್ತು ಮಾನವಿಕ ಶಾಲೆಯ ಅರ್ಥಶಾಸ್ತ್ರ ವಿಭಾಗವು ಪಿಯುಸಿ ಮತ್ತು ಪದವಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಅಂತರ್ ಕಾಲೇಜು ಅರ್ಥಶಾಸ್ತ್ರ ಉತ್ಸವ 'ಎಕನೋವಾಂಜಾ-2025' ಕಾರ್ಯಕ್ರಮವನ್ನು ಬುಧವಾರ ಕಾಲೇಜಿನ ಎಲ್.ಎಫ್. ರಸ್ಕೀನಾ ಸಭಾಂಗಣದಲ್ಲಿ ನಡೆಯಿತು. ಉತ್ಸವವನ್ನು ಹುಂಡಿಗೆ ನಾಣ್ಯ ಹಾಕುವ ಮೂಲಕ ಉದ್ಘಾಟಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ರೋಲ್ಸ್ ರಾಯ್ಸ್‌ನಲ್ಲಿ ಉದ್ಯೋಗ ಪಡೆದುಕೊಂಡಿರುವ ಯುವ ಪ್ರತಿಭೆ ಎಂಜಿನಿಯರ್ ರಿತುಪರ್ಣ ಕೆ.ಎಸ್. ಮಾತನಾಡಿ, ಉತ್ತಮ ಕೆಲಸ ಮತ್ತು ಫಲಪ್ರದ ವೃತ್ತಿಜೀವನಕ್ಕೆ ಕಾರಣವಾಗುವುದು ಅಂಕಗಳಲ್ಲ, ಬದಲಾಗಿ ಕೌಶಲಗಳು ಎಂದರು.

ಶಾಸ್ತ್ರೀಯ ನರ್ತಕಿ, ಚಲನಚಿತ್ರ ನಟಿ ಶ್ವೇತಾ ಅರೆಹೊಳೆ ಮಾತನಾಡಿ, ವಿದ್ಯಾರ್ಥಿಗಳು ತಾವು ಮಾಡುವ ಯಾವುದೇ ಕೆಲಸದಲ್ಲಿ ತಮ್ಮ ಅತ್ಯುತ್ತಮವಾದದ್ದನ್ನು ನೀಡಬೇಕು ಎಂದರು.

ಸಂತ ಅಲೋಶಿಯಸ್ ವಿ.ವಿ.ಯ ಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್ ಎಸ್.ಜೆ. ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ದರು. ಕರ್ನಾಟಕ ಮತ್ತು ಗೋವಾದ 17 ಕಾಲೇಜುಗಳ ವಿದ್ಯಾರ್ಥಿಗಳು 10 ವಿಭಿನ್ನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

**ಸಮಾರೋಪ**

ಸಮಾರೋಪದಲ್ಲಿ ಇಕೋಪ್ರೆನಿಯರ್ ಮತ್ತು ಮಾರಾಟ ಮತ್ತು ಮಾರ್ಕೆಟಿಂಗ್‌ನ ಮಂಗಲನಾಥ್ ಎಂ.ಕೆ., ಉದ್ಯಮಿ ವಿಜೋಯ್ ಅಶ್ವಿನ್ ಕಾಡೋರ್ಜ, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಆಡಳಿತ ನಿರ್ದೇಶಕ ಡಾ। ಚಾರ್ಲ್ಸ್ ವಿ. ಫುರ್ಟಾಡೊ ಭಾಗವಹಿಸಿ ಶುಭಹಾರೈಸಿದರು.

ಎಸ್‌ಡಿಎಂ ಕಾಲೇಜು ಉಜಿರೆ, ಕ್ರಿಯೇಟಿವ್ ಕಾಲೇಜು ಕಾರ್ಕಳ ಇಕೊನೊವಾಂಜಾ 2025 ಸಮಗ್ರ ಚಾಂಪಿಯನ್‌ಶಿಪ್ ಗೆದ್ದುಕೊಂಡಿತು.

ನಟ ಅವಿನಾಶ್ ಶೆಟ್ಟಿ ಕಾರ್ಯಕ್ರಮದ ವಿದ್ಯಾರ್ಥಿ ಸಂಯೋಜಕಿ ಪ್ರತೀಕ್ಷಾ ಮೊದಲಾದವರು ಉಪಸ್ಥಿತರಿದ್ದರು.

Varthabharathi 02-08-2025

# ಎಕನೋವನ್ಸಾ ವಿವಿಧ ಸ್ಪರ್ಧಾವಳಿ ಕ್ರಿಯೇಟಿವ್ ಕಾಲೇಜಿಗೆ ಪ್ರಶಸ್ತಿ




ಕಾರ್ಕಳ, ಆ.1: ಕಾಮರ್ಸ್ ಫೆಸ್ಟ್ ಪ್ರಯುಕ್ತ ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ ನಡೆಸಲ್ಪಟ್ಟ ಎಕನೋವನ್ಸಾ ಇಂಟರ್ ಕಾಲೇಜುಗಳ ವಿವಿಧ ಸ್ಪರ್ಧಾವಳಿಗಳಲ್ಲಿ ಕ್ರಿಯೇಟಿವ್ ಕಾಲೇಜಿನ ವಿದ್ಯಾರ್ಥಿಗಳು ಸಮಗ್ರ ಪ್ರಶಸ್ತಿಯೊಂದಿಗೆ ಚಾಂಪಿಯನ್‌ಶಿಪ್ ಮತ್ತು ನಗದು ಪುರಸ್ಕಾರವನ್ನು ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿಗಳಾದ ಆದ್ಯಾ ಪಡ್ರೆ, ಚಿರಾಯು, ಸುಜೀತ್, ಶ್ರೇಯಸ್, ಮಂಗಿಲಲ್, ಅನ್ವಿತ್, ಕಿಶನ್, ಚಿನ್ಮಯ್, ಸೃಷ್ಟಿ, ಅರುಷಿ, ಸೋನಿಯಾ, ಸಂಜನಾ, ಪ್ರೇರಣಾ, ಹರ್ಷಿತಾ, ಅನಿಷಾ, ವೃದ್ಧಿ, ದ್ಯುತಿ, ಪೂರ್ವಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

Udayavani 03-08-2025

# ವಿಭಿನ್ನ ಕೌಶಲಗಳಿಂದ ಬೋಧನೆ: ಉಪನ್ಯಾಸಕರಿಗೆ ಸಲಹೆ



**ಮಹಾನಗರ, ಆ. 2:** ಬೆಸೆಂಟ್ ಮಹಿಳಾ ಕಾಲೇಜಿನ ಆಂತರಿಕ ಗುಣಮಟ್ಟ ಖಾತರಿ ಕೋಶದ ಆಶ್ರಯದಲ್ಲಿ ಉಪನ್ಯಾಸಕರಿಗಾಗಿ ಒಂದು ದಿನದ ಬೋಧಕ ಸುಧಾರಣ ಕಾರ್ಯಕ್ರಮ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು.

ಸಂತ ಅಲೋಶಿಯಸ್ ಡೀಮ್ಡ್ ವಿಶ್ವವಿದ್ಯಾನಿಲಯದ ಇಂಗ್ಲಿಷ್ ಪ್ರಾಧ್ಯಾಪಕ ಡಾ। ಚಾರ್ಲ್ಸ್ ವಿ. ಫುರ್ಟಾಡೋ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಶಿಕ್ಷಕರು ತರಗತಿಗಳಲ್ಲಿ ವಿಭಿನ್ನ ರೀತಿಯ ಕೌಶಲಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳನ್ನು ಮುನ್ನಡೆಸಿಕೊಂಡು ಹೋಗಬೇಕು ಎಂದರು.

ಬೆಸೆಂಟ್ ಮಹಿಳಾ ಕಾಲೇಜಿನ ಸಂಚಾಲಕಿ ಹಾಗೂ ವಿಮೆನ್ಸ್ ನ್ಯಾಶನಲ್ ಎಜುಕೇಷನಲ್ ಸೊಸೈಟಿ ಉಪಾಧ್ಯಕ್ಷೆ ಡಾ। ಮಂಜುಳಾ ಕೆ.ಟಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬೆಸೆಂಟ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ। ಪ್ರವೀಣ್ ಕುಮಾರ್ ಕೆ.ಸಿ., ಬೆಸೆಂಟ್ ಸಂಧ್ಯಾ ಕಾಲೇಜಿನ ಡಾ।ಪರಶುರಾಮ ಜಿ. ಮಾಳಗೆ, ಕಚೇರಿ ಸಿಬಂದಿ ವಿಜಯಲಕ್ಷ್ಮೀ ಉಪಸ್ಥಿತರಿದ್ದರು.

ಎರಡೂ ಕಾಲೇಜಿನ ಉಪನ್ಯಾಸಕರು ಕಾರ್ಯಕ್ರಮದ ಪ್ರಯೋಜನವನ್ನು ಪಡೆದರು. ಆಂತರಿಕ ಗುಣಮಟ್ಟ ಖಾತರಿ ಕೋಶದ ಸಂಚಾಲಕ ಡಾ। ಸತೀಶ್ ಕೆ. ಸ್ವಾಗತಿಸಿದರು. ಉಪನ್ಯಾಸಕಿ ಶೈಲಾ ಕಾಮತ್ ವಂದಿಸಿದರು. ವಿದ್ಯಾ ಭಟ್ ಕಾರ್ಯಕ್ರಮವನ್ನು ನಿರೂಪಿಸಿದರು.

Varthabharathi 03-08-2025

# ಅಲೋಶಿಯಸ್ ವಿವಿಯಲ್ಲಿ 'ಸಸ್ಯ ವಿಜ್ಞಾನದಲ್ಲಿ ತಂತ್ರಗಳು' ಕಾರ್ಯಾಗಾರ



ಮಂಗಳೂರು, ಆ.2: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಲೈಫ್ ಸೈನ್ಸ್ ಶಾಲೆಯ ಸಸ್ಯಶಾಸ್ತ್ರ ವಿಭಾಗವು 'ಸಸ್ಯ ವಿಜ್ಞಾನದಲ್ಲಿ ತಂತ್ರಗಳು' ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಮಂಗಳೂರು ಮತ್ತು ಉಡುಪಿ ಜಿಲ್ಲೆಗಳ ಸುತ್ತಮುತ್ತಲಿನ 60 ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಸಸ್ಯಶಾಸ್ತ್ರ ಪ್ರಯೋಗಾಲಯದಲ್ಲಿ ಕೌಶಲ್ಯ ಆಧಾರಿತ ಪ್ರಯೋಗಗಳನ್ನು ನಡೆಸಲಾಯಿತು.

ಕ್ಸೇವಿಯರ್ ಬ್ಲಾಕ್‌ನ ನಿರ್ದೇಶಕ ಡಾ.ಈಶ್ವರ ಭಟ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಕುತೂಹಲ ಮತ್ತು ಪ್ರಾಯೋಗಿಕ ಕಲಿಕೆಯನ್ನು ಉತ್ತೇಜಿಸುವ ಸಾಧನವಾಗಿ ಇಂತಹ ಕಾರ್ಯಾಗಾರಗಳನ್ನು ಆಯೋಜಿಸುವ ಮಹತ್ವವನ್ನು ವಿವರಿಸಿದರು. ಲೈಫ್ ಸೈನ್ಸ್ ಶಾಲೆಯ ಡೀನ್ ಡಾ.ಹೇಮಚಂದ್ರ ಮಾತನಾಡಿದರು.

ಕಾರ್ಯಾಗಾರದಲ್ಲಿ ಸಂಶ್ಲೇಷಿತ ಬೀಜ ತಯಾರಿಕೆ, ಅಗರೋಸ್ ಜೆಲ್ ಇಲೆಕ್ಟ್ರೋಫೋರೆಸಿಸ್, ಫೈಟೊಕೆಮಿಕಲ್‌ಗಳ ಸಾಕ್ಸ್‌ಲೆಟ್ ಹೊರತೆಗೆಯುವಿಕೆ, ಸಾರಭೂತ ತೈಲ ಹೊರತೆಗೆಯುವಿಕೆಯನ್ನು ಪ್ರದರ್ಶಿಸುವ ಕ್ಲೆವೆಂಜರ್ ಉಪಕರಣ, ಗ್ರಾಂ ಸ್ಟೇನಿಂಗ್, ಹರ್ಬೇರಿಯಮ್ ಮಾದರಿ ತಯಾರಿಕೆ, ಬೇರು ಗಂಟುಗಳಿಂದ ರೈಜೋಬಿಯಂ ಅನ್ನು ಪ್ರತ್ಯೇಕಿಸುವುದು, ಸೂಕ್ಷ್ಮ ಪಾಚಿಗಳ ಗುರುತಿಸುವಿಕೆ, ಕ್ರಿಮಿನಾಶಕ ತಂತ್ರಗಳು, ಹಸಿರುಮನೆಯಲ್ಲಿ ಸಸ್ಯಗಳ ವಿವಿಧ ಪರಿಸರ ಗುಂಪುಗಳ ಪರಿಶೋಧನೆ ಇತ್ಯಾದಿಗಳ ಪ್ರಾತ್ಯಕ್ಷಿಕೆ ನಡೆಯಿತು.

ಸುಸನ್ನಾ ಕ್ಲಾಲ್ಕೊ ಕಾರ್ಯಕ್ರಮ ನಿರೂಪಿಸಿದರು. ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಶಿಲ್ಪಾ ಬಿ. ಸ್ವಾಗತಿಸಿದರು. ಶಿಲ್ಪಾ ಪೈ ವಂದಿಸಿದರು. ಸಹಾಯಕ ಪ್ರಾಧ್ಯಾಪಕಿ ಡಾ.ಸನಾ ಶೇಖ್, ಸಸ್ಯಶಾಸ್ತ್ರ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ.ಜ್ಯೋತಿ ಮಿರಾಂಡಾ ಮತ್ತು ಐಐಐ ಬಿಎಸ್ಸಿ ವಿದ್ಯಾರ್ಥಿಗಳಾದ ಹರ್ಷಿತ್ ಕೆ.ಕೆ. ಮತ್ತು ಅಕ್ಷತಾ ಪೈ ಪಿ. ಕಾರ್ಯಕ್ರಮ ಸಂಯೋಜಿಸಿದರು.

Udayavani 03-08-2025







# 170 ಗಂಟೆ ನಿರಂತರ ಭರತನಾಟ್ಯ ರೆಮೋನ ಬರೆದ ದಾಖಲೆ

## 170 ಗಂಟೆ ನಿರಂತರ ಭರತನಾಟ್ಯ...

8ನೇ ಪುಟದಿಂದ...

'ಪ್ರಯೋಗದಿಂದ ನನಗೆ ತೊಂದರೆ ಆಗುವುದಿಲ್ಲ ಎನ್ನುವುದು ಅಮ್ಮನಿಗೆ ಮನದಟ್ಟಾದರೆ ಮಾತ್ರ ಅಂತಹ ನೃತ್ಯವನ್ನು ಮಾಡಲು ಹೇಳುತ್ತಿದ್ದರು' ಎಂದು ಹೇಳುವಾಗ ಕಣ್ಣಲ್ಲಿ ನೀರಿತ್ತು. ಅಷ್ಟಾದರೂ ಒಮ್ಮೆ ಸಮುದ್ರ ದಂಡೆಯಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ಎರಡೂ ಕೈಗಳಲ್ಲಿ ಬೆಂಕಿಯ ಮಣ್ಣಿನ ಮಡಕೆಗಳನ್ನು ಹಿಡಿದು ನೃತ್ಯ ಮಾಡುತ್ತಿರಬೇಕಾದರೆ ಮಡಕೆ 'ಟಪ್' ಅಂತ ಒಡೆಯಿತು. ಬೆಂಕಿಯುರುವ ಮಡಕೆಯನ್ನು ಬಿಸಾಡಿಬಿಡುವಂತಿಲ್ಲ, ಮುಂದೆಯೇ ಪ್ರೇಕ್ಷಕರಿದ್ದಾರೆ. ಹಾಗೆಂದು ಅಂಗೈ ಸುಡುತ್ತಿತ್ತು. ಅಷ್ಟರಲ್ಲಿ ಅಮ್ಮನೇ ಬಂದು ಮಡಕೆಗಳನ್ನು ತೆಗೆದುಕೊಂಡು ಹೋದರು. ಹೊಸ ಪ್ರಯೋಗಗಳನ್ನು ಮಾಡುವಾಗ ಇಂತಹ ಸವಾಲುಗಳಿರುತ್ತವೆ. ಆದರೂ ಹೊಸದನ್ನು ಪ್ರಯತ್ನಿಸುವುದರಲ್ಲಿಯೇ ಹೆಚ್ಚಿನ ಖುಷಿಯಿರುತ್ತದೆ' ಎಂದು ರೆಮೋನ ಹೇಳುತ್ತಾರೆ. ಮುಂದೇನು ಎಂಬ ಪ್ರಶ್ನೆಗೆ ಭರತನಾಟ್ಯದಲ್ಲಿ ವಿದ್ವತ್ ಪರೀಕ್ಷೆಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವೆ ಎಂದರು.

'ಇವರಿಗೆ ನೃತ್ಯವೇ ಜೀವ ಮತ್ತು ಜೀವನ, ಎಲ್ಲವೂ.

ರೆಮೋನ ಇವೆಟ್ ಪಿರೇರ

Varthabharati 03-08-2025

## ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಾಧಕಿಗೆ ಸನ್ಮಾನ



ಮಂಗಳೂರು, ಆ.2: ಏಳು ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲಿಸಿದ ಭರತನಾಟ್ಯ ಕಲಾವಿದೆ ರೆಮೋನಾ ಎವೆಟ್ ಪಿರೇರಾರನ್ನು ರೋಹನ್ ಕಾರ್ಪೊರೇಶನ್ ಸಂಸ್ಥೆಯ ವತಿಯಿಂದ ಶುಕ್ರವಾರ ಗೌರವಿಸಿ ಸನ್ಮಾನಿಸಲಾಯಿತು.

ಬಿಜೈ ಮುಖ್ಯ ರಸ್ತೆಯ ರೋಹನ್ ಸಿಟಿಯಲ್ಲಿರುವ ಸಂಸ್ಥೆಯ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಸ್ಥಾಪಕ ಡಾ.ರೋಹನ್ ಮೊಂತೇರೊರವರು ರೆಮೋನಾರಿಗೆ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಿ ಗೌರವಿಸಿದರು.

ರೆಮೋನಾರ ಸಾಧನೆ ಮಂಗಳೂರು ಮಾತ್ರವಲ್ಲ, ಇಡೀ ದೇಶಕ್ಕೆ ಹೆಮ್ಮೆ ತಂದಿದೆ. ಇವರು ಇಂದಿನ ಯುವ ಸಮುದಾಯಕ್ಕೆ ಸ್ಫೂರ್ತಿ ಎಂದು ಡಾ.ರೋಹನ್ ಮೊಂತೇರೊ ಶ್ಲಾಘಿಸಿದರು.

Vijayavani 04-08-2025

## ರೋಹನ್ ಕಾರ್ಪೊರೇಶನ್‌ನಿಂದ ರೆಮೋನಾ ಪಿರೇರಾಗೆ ಗೌರವಾರ್ಪಣೆ



ರೋಹನ್ ಸಿಟಿಯಲ್ಲಿರುವ ಸಂಸ್ಥೆಯ ಕಚೇರಿಯಲ್ಲಿ ರೆಮೋನಾ ಪಿರೇರಾ ಅವರನ್ನು ಸಂಸ್ಥೆಯ ಸ್ಥಾಪಕ ಡಾ.ರೋಹನ್ ಮೊಂತೆರೊ ಸನ್ಮಾನಿಸಿದರು.

**ಮಂಗಳೂರು:** ಏಳು ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ದಾಖಲಿಸಿದ ರೆಮೋನಾ ಪಿರೇರಾ ಅವರನ್ನು ರೋಹನ್ ಕಾರ್ಪೊರೇಶನ್ ಸಂಸ್ಥೆ ವತಿಯಿಂದ ನಗರದ ಬಿಜೈ ಮುಖ್ಯ ರಸ್ತೆಯ ರೋಹನ್ ಸಿಟಿಯಲ್ಲಿರುವ ಸಂಸ್ಥೆಯ ಕಚೇರಿಯಲ್ಲಿ ಸನ್ಮಾನಿಸಲಾಯಿತು.

ಸಂಸ್ಥೆಯ ಸ್ಥಾಪಕ ಡಾ.ರೋಹನ್ ಮೊಂತೆರೊ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಿ ಗೌರವಿಸಿ, ಸ್ಥಳೀಯ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಹಾಗೂ ಮಂಗಳೂರಿನ ಕಲೆ, ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಬೆಳಕಿಗೆ ತರುವ ಉದ್ದೇಶದಿಂದ ಸನ್ಮಾನ ಕಾರ್ಯಕ್ರಮ ಮಾಡಲಾಗಿದೆ. ರೆಮೋನಾ ಅವರ ಸಾಧನೆ ಮಂಗಳೂರು ಮಾತ್ರವಲ್ಲ, ಇಡೀ ದೇಶಕ್ಕೆ ಹೆಮ್ಮೆ ತಂದಿದೆ. ಇವರು ಇಂದಿನ ಯುವ ಸಮುದಾಯಕ್ಕೆ ಸ್ಫೂರ್ತಿಯಾಗಿದ್ದಾರೆ ಎಂದು ಹೇಳಿದರು.

Udayavani 04-08-2025

## ದಾಖಲೆಗೈದ ರೆಮೋನಾ ಅವರಿಗೆ ರೋಹನ್ ಕಾರ್ಪೊರೇಷನ್ ಸಮ್ಮಾನ



**ಮಹಾನಗರ, ಆ.3:** ನಿರಂತರ 170 ಗಂಟೆ ಭರತನಾಟ್ಯ ಪ್ರದರ್ಶನ ನೀಡಿ 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್' ಸಾಧನೆ ಮಾಡಿದ ಮಂಗಳೂರಿನ ಭರತನಾಟ್ಯ ಕಲಾವಿದೆ ರೆಮೋನಾ ಪಿರೇರಾ ಅವರನ್ನು ರೋಹನ್ ಕಾರ್ಪೊರೇಶನ್ ಸಂಸ್ಥೆಯ ವತಿಯಿಂದ ಸಮ್ಮಾನಿಸಲಾಯಿತು.

ಮಂಗಳೂರಿನ ಬಿಜೈ ಮುಖ್ಯರಸ್ತೆಯ ರೋಹನ್ ಸಿಟಿಯಲ್ಲಿರುವ ಸಂಸ್ಥೆಯ ಕಚೇರಿಯಲ್ಲಿ ಸಂಸ್ಥೆಯ ಸ್ಥಾಪಕ ಡಾ| ರೋಹನ್ ಮೊಂತೇರೊ ಅವರು ರೆಮೋನಾ ಪಿರೇರಾ ಅವರಿಗೆ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಿ ಗೌರವಿಸಿದರು.

ಈ ಸಂದರ್ಭ ಮಾತನಾಡಿದ ಡಾ| ರೋಹನ್ ಮೊಂತೇರೊ ಅವರು, ರೆಮೋನಾ ಅವರ ಸಾಧನೆ ಮಂಗಳೂರು ಮಾತ್ರವಲ್ಲ, ಇಡೀ ದೇಶಕ್ಕೆ ಹೆಮ್ಮೆ ತಂದಿದೆ. ಇವರು ಇಂದಿನ ಯುವ ಸಮುದಾಯಕ್ಕೆ ಸ್ಫೂರ್ತಿ. ಅದ್ವಿತೀಯ ಸಾಧನೆಗಾಗಿ ಸಂಸ್ಥೆಯ ವತಿಯಿಂದ ಭವಿಷ್ಯದಲ್ಲಿಯೂ ಇಂತಹ ಪ್ರತಿಭೆಗಳಿಗೆ ವೇದಿಕೆ ನೀಡಲಾಗುವುದು ಎಂದು ಹೇಳಿದರು.ಸ್ಥಳೀಯ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಹಾಗೂ ಮಂಗಳೂರಿನ ಕಲೆ, ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಬೆಳಕಿಗೆ ತರುವ ಉದ್ದೇಶದಿಂದ ಈ ಸಮ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

Vijayakarnataka 0408-2025

## ರೆಮೋನಾಗೆ ರೋಹನ್ ಕಾರ್ಪೊರೇಶನ್ ಗೌರವ

■ **ವಿಕ ಸುದ್ದಿಲೋಕ** ಮಂಗಳೂರು

ಭರತನಾಟ್ಯ ಕಲಾವಿದೆ ರೆಮೋನಾ ಎವೆಟ್ ಪಿರೇರಾ ಅವರು 7 ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲಿಸಿದ ಹಿನ್ನೆಲೆಯಲ್ಲಿ ರೋಹನ್ ಕಾರ್ಪೊರೇಶನ್ ಸಂಸ್ಥೆ ಅವರ ಸಾಧನೆಯನ್ನು ಗುರುತಿಸಿ ಶುಕ್ರವಾರ ವಿಶೇಷವಾಗಿ ಸನ್ಮಾನಿಸಿದೆ.

ಮಂಗಳೂರಿನ ಬಿಜೈ ಮುಖ್ಯ ರಸ್ತೆಯ ರೋಹನ್ ಸಿಟಿಯಲ್ಲಿರುವ ಕಚೇರಿಯಲ್ಲಿ ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಸ್ಥಾಪಕ ಡಾ.ರೋಹನ್ ಮೊಂತೇರೊ ಅವರು ರೆಮೋನಾ ಪಿರೇರಾ ಅವರಿಗೆ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಿ ಮಾತನಾಡಿ,. ಸ್ಥಳೀಯ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಹಾಗೂ ಮಂಗಳೂರಿನ ಕಲೆ, ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಬೆಳಕಿಗೆ ತರುವ ಉದ್ದೇಶದಿಂದ ಈ ಸನ್ಮಾನ



ಭರತನಾಟ್ಯ ಕಲಾವಿದೆ ರೆಮೋನಾ ಎವೆಟ್ ಪಿರೇರಾ ಅವರನ್ನು ರೋಹನ್ ಸಿಟಿಯಲ್ಲಿರುವ ಕಚೇರಿಯಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರೆಮೋನಾ ಅವರ ಸಾಧನೆ ಮಂಗಳೂರು ಮಾತ್ರವಲ್ಲ, ಇಡೀ ದೇಶಕ್ಕೆ ಹೆಮ್ಮೆ ತಂದಿದೆ. ಇವರು ಇಂದಿನ ಯುವ ಸಮುದಾಯಕ್ಕೆ ಸ್ಫೂರ್ತಿ ಎಂದು ಹೇಳಿದರು.

Samyukta Karnataka 03-08-2025

# ರೋಹನ್ ಕಾರ್ಪೊರೇಶನ್ ಸಂಸ್ಥೆಯಿಂದ ಸನ್ಮಾನ

## ಭರತನಾಟ್ಯ ಕಲಾವಿದೆ ರೆಮೋನಾಗೆ ಅಭಿನಂದನೆ

**ಸಂ.ಕ.ಸಮಾಚಾರ, ಮಂಗಳೂರು**

ಮಂಗಳೂರಿನ ಭರತನಾಟ್ಯ ಕಲಾವಿದೆಯಾದ ರೆಮೋನಾ ಎವೆಟ್ ಪಿರೇರಾ ಅವರು 7 ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲಿಸಿದ ಹಿನ್ನೆಲೆಯಲ್ಲಿ, ರೋಹನ್ ಕಾರ್ಪೊರೇಶನ್ ಸಂಸ್ಥೆ ಅವರ ಸಾಧನೆಯನ್ನು ಗುರುತಿಸಿ ಶುಕ್ರವಾರ ವಿಶೇಷವಾಗಿ ಸನ್ಮಾನಿಸಿದೆ.

ಈ ಸನ್ಮಾನ ಕಾರ್ಯಕ್ರಮವು ಮಂಗಳೂರಿನ ಬಿಜೈ ಮುಖ್ಯ ರಸ್ತೆಯ ರೋಹನ್ ಸಿಟಿಯಲ್ಲಿರುವ ಕಚೇರಿಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಸ್ಥಾಪಕ ಡಾ. ರೋಹನ್ ಮೊಂತೇರೊ ಅವರು ರೆಮೋನಾ ಪಿರೇರಾ ಅವರಿಗೆ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಿ ಗೌರವಿಸಿದರು.

ಸ್ಥಳೀಯ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಹಾಗೂ ಮಂಗಳೂರಿನ ಕಲೆ, ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಬೆಳಕಿಗೆ ತರುವ ಉದ್ದೇಶದಿಂದ ಈ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರೆಮೋನಾ ಅವರ ಸಾಧನೆ ಮಂಗಳೂರು ಮಾತ್ರವಲ್ಲ, ಇಡೀ ದೇಶಕ್ಕೆ ಹೆಮ್ಮೆ ತಂದಿದೆ. ಇವರು ಇಂದಿನ ಯುವ ಸಮುದಾಯಕ್ಕೆ ಸ್ಫೂರ್ತಿ ಅದ್ವಿತೀಯ ಸಾಧನೆಗಾಗಿ ಸಂಸ್ಥೆಯ ವತಿಯಿಂದ ಭವಿಷ್ಯದಲ್ಲಿಯೂ ಇಂತಹ ಪ್ರತಿಭೆಗಳಿಗೆ ವೇದಿಕೆ ನೀಡಲಾಗುವುದು ಎಂದು ಎಂದು ಡಾ. ರೋಹನ್ ಮೊಂತೇರೊ ಹೇಳಿದರು.



Vijayakarnatka 06-08-2025

# 'ಸಾಧನೆಯಿಂದ ಯಶಸ್ಸು ಸಾಧ್ಯ'



ಗೋಲ್ಡನ್ ಬುಕ್ ಆಫ್ ರೆಕಾರ್ಡ್ ಮಾಡಿದ ಸೌರಭ ನೃತ್ಯಕಲಾ ಪರಿಷತ್ ಸಂಸ್ಥೆಯ ಡಾ. ಶ್ರೀವಿದ್ಯಾರ ಶಿಷ್ಯೆ ರೆಮೋನಾ ಎವೆಟ್ ಪಿರೇರಾ ಅವರನ್ನು ಅಭಿನಂದಿಸಲಾಯಿತು.

**ವಿಕ ಸುದ್ದಿಲೋಕ** ಮಂಗಳೂರು

ಮನುಷ್ಯ ಸಾಧನೆಯಿಂದ ಏನನ್ನೂ ಸಾಧಿಸಬಹುದು. ರೆಮೋನಾ ಊಟ-ತಿಂಡಿ-ನಿದ್ರೆ ದೈನಂದಿನ ನಿತ್ಯ ಕಾರ್ಯಗಳನ್ನು ಹತೋಟಿಯಲ್ಲಿಟ್ಟುಕೊಂಡು ನೃತ್ಯ ಕ್ಷೇತ್ರದಲ್ಲಿ ಒಂದು ವಿಶೇಷ ಸಾಧನೆ ಮಾಡಿದ್ದು ಹೆಮ್ಮೆ ಹಾಗೂ ಜಿಲ್ಲೆಯ ಹೆಸರನ್ನು ಅಂತಾ ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ ಎಂದು ಶರವು ಕ್ಷೇತ್ರದ ಶಿಲೆ ಶಿಲೆ ಮೊಕ್ತೇಸರ ರಾಘವೇಂದ್ರ ಶಾಸ್ತ್ರಿ ಹೇಳಿದರು.

ಕರ್ನಾಟಕ ಕರಾವಳಿ ನೃತ್ಯ ಕಲಾ ಪರಿಷತ್ ವತಿಯಿಂದ ಮಂಗಳವಾರ ಆಯೋಜಿಸಿದ ನೃತ್ಯ ಕ್ಷೇತ್ರದಲ್ಲಿ ಸತತ 170 ಗಂಟೆಗಳ ಕಾಲ ಭರತನಾಟ್ಯ ಮ್ಯಾರಥಾನ್ ಮಾಡಿ ಗೋಲ್ಡನ್ ಬುಕ್ ರೆಕಾರ್ಡ್ ಮಾಡಿದ ಸೌರಭ ನೃತ್ಯಕಲಾ ಪರಿಷತ್ ಸಂಸ್ಥೆಯ ಡಾ. ಶ್ರೀವಿದ್ಯಾ ಅವರ ಶಿಷ್ಯೆ ರೆಮೋನಾ ಎವೆಟ್ ಪಿರೇರಾ ಅವರನ್ನು ಅಭಿನಂದಿಸಿ ಮಾತನಾಡಿದರು.

ಅಭಿನಂದನೆ ಸ್ವೀಕರಿಸಿ ರೆಮೋನಾ ಮಾತನಾಡಿ, ನನ್ನ ಯಶಸ್ಸಿನ ಹಿಂದೆ ತಾಯಿ ಮತ್ತು ಗುರುಗಳಲ್ಲದೆ ಜಿಲ್ಲೆಯ ಕಲಾಭಿಮಾನಿಗಳ ಆಶೀರ್ವಾದದಿಂದ ಇದು ಸಾಧ್ಯವಾಯಿತು ಎಂದರು. ಅಧ್ಯಕ್ಷೆ ರಾಜಶ್ರೀ ಉಳ್ಳಾಲ್ ಅಭಿನಂದನೆಯ ಮಾತುಗಳನ್ನಾಡಿದರು. ಕೋಶಾಧಿಕಾರಿ ವಿದ್ವಾನ್ ಸುರೇಶ್ ಅತ್ತಾವರ, ಉಪಾಧ್ಯಕ್ಷ ವಿದ್ವಾನ್ ಚಂದ್ರಶೇಖರ ನಾವಡ, ಟ್ರಸ್ಟಿಗಳಾದ ವಿದ್ವಾನ್ ಪ್ರವೀಣ್ ಯು.ಕೆ., ವಿದುಷಿ ನಯನ ವಿ. ರೈ ಪುತ್ತೂರು. ಸದಸ್ಯರಾದ ವಿದ್ವಾನ್ ಸುದರ್ಶನ್, ದೀಪಕ್ ಕುಮಾರ್ ಪುತ್ತೂರು, ಭವಾನಿ ಶಂಕರ ಉಡುಪಿ, ವಿದುಷಿಯರಾದ ಮಂಜುಳಾ ಸುಬ್ರಹ್ಮಣ್ಯ, ಸವಿತಾ ಜೀವನ್, ಲತಾ ಶಶಿಧರ್, ವಿದ್ಯಾಶ್ರೀ ರಾಧಾಕೃಷ್ಣ ಹಾಗೂ ಹಿರಿಯ ಕಿರಿಯ ನೃತ್ಯ ಗುರುಗಳು ಉಪಸ್ಥಿತರಿದ್ದರು. ಪರಿಷತ್ ನ ಕಾರ್ಯದರ್ಶಿ ವಿದುಷಿ ಶಾರದಾಮಣಿ ಶೇಖರ್ ಸ್ವಾಗತಿಸಿದರು. ಜತೆ ಕಾರ್ಯದರ್ಶಿ ಶ್ರೀಧರ ಹೊಳ್ಳ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

Prajavani 05-08-2025



ಸತತ 170 ಗಂಟೆ ಭರತನಾಟ್ಯ ಪ್ರದರ್ಶಿಸಿ ವಿಶ್ವದಾಖಲೆ ಮಾಡಿದ ರೆಮೊನಾ ಪೆರೇರಾ ಅವರನ್ನು ಬ್ರಹ್ಮಕುಮಾರೀಸ್ ಮಂಗಳೂರು ಶಾಖೆಯಲ್ಲಿ ಸನ್ಮಾನಿಸಲಾಯಿತು. ಬ್ರಹ್ಮಕುಮಾರೀಸ್ ಹುಬ್ಬಳ್ಳಿ ವಲಯದ ರಾಜಯೋಗಿನಿ ನಿರ್ಮಲ, ಮಂಗಳೂರು ಶಾಖೆಯ ಸಂಚಾಲಕರಾದ ವಿಶ್ವೇಶ್ವರಿ, ಆಪ್ತಸಮಾಲೋಚಕಿ ರೇವತಿ ಇತರರು ಪಾಲ್ಗೊಂಡಿದ್ದರು

Vijayakarnataka 0408-2025

# ರೆಮೋನಾಗೆ ರೋಹನ್ ಕಾರ್ಪೊರೇಶನ್ ಗೌರವ

**ವಿಕ ಸುದ್ದಿಲೋಕ** ಮಂಗಳೂರು

ಭರತನಾಟ್ಯ ಕಲಾವಿದೆ ರೆಮೋನಾ ಎವೆಟ್ ಪಿರೇರಾ ಅವರು 7 ದಿನಗಳ ಕಾಲ ನಿರಂತರ ಭರತನಾಟ್ಯ ಪ್ರದರ್ಶನ ನೀಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ದಾಖಲಿಸಿದ ಹಿನ್ನೆಲೆಯಲ್ಲಿ ರೋಹನ್ ಕಾರ್ಪೊರೇಶನ್ ಸಂಸ್ಥೆ ಅವರ ಸಾಧನೆಯನ್ನು ಗುರುತಿಸಿ ಶುಕ್ರವಾರ ವಿಶೇಷವಾಗಿ ಸನ್ಮಾನಿಸಿದೆ.

ಮಂಗಳೂರಿನ ಬಿಜೈ ಮುಖ್ಯ ರಸ್ತೆಯ ರೋಹನ್ ಸಿಟಿಯಲ್ಲಿರುವ ಕಚೇರಿಯಲ್ಲಿ ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಸ್ಥಾಪಕ ಡಾ.ರೋಹನ್ ಮೊಂತೇರೊ ಅವರು ರೆಮೋನಾ ಪಿರೇರಾ ಅವರಿಗೆ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಿ ಮಾತನಾಡಿ,, ಸ್ಥಳೀಯ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಹಾಗೂ ಮಂಗಳೂರಿನ ಕಲೆ, ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಬೆಳಕಿಗೆ ತರುವ ಉದ್ದೇಶದಿಂದ ಈ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರೆಮೋನಾ ಅವರ ಸಾಧನೆ ಮಂಗಳೂರು ಮಾತ್ರವಲ್ಲ, ಇಡೀ ದೇಶಕ್ಕೆ ಹೆಮ್ಮೆ ತಂದಿದೆ. ಇವರು ಇಂದಿನ ಯುವ ಸಮುದಾಯಕ್ಕೆ ಸ್ಫೂರ್ತಿ ಎಂದು ಹೇಳಿದರು.



ಭರತನಾಟ್ಯ ಕಲಾವಿದೆ ರೆಮೋನಾ ಎವೆಟ್ ಪಿರೇರಾ ಅವರನ್ನು ರೋಹನ್ ಸಿಟಿಯಲ್ಲಿರುವ ಕಚೇರಿಯಲ್ಲಿ ಸನ್ಮಾನಿಸಲಾಯಿತು.

Hosadigantha 05-08-2025

## ಬ್ರಹ್ಮಕುಮಾರೀಸ್ ಮಂಗಳೂರು ಶಾಖೆಯಿಂದ ಆಯೋಜನೆ

# ವಿಶ್ವದಾಖಲೆಯ ನೃತ್ಯಕಲಾವಿದೆ ರೆಮೊನಾಗೆ ಸನ್ಮಾನ



**ಮಂಗಳೂರು:** ಯುವ ಪ್ರತಿಭೆ ರೆಮೊನಾ ಪಿರೇರಾ ಅವರು 170 ಗಂಟೆಗಳ ನಿರಂತರ ನೃತ್ಯ ಪ್ರದರ್ಶನದ ಮೂಲಕ ವಿಶ್ವದಾಖಲೆ ನಿರ್ಮಿಸಿರುವ ಹಿನ್ನೆಲೆಯಲ್ಲಿ ಬ್ರಹ್ಮಕುಮಾರೀಸ್ ಮಂಗಳೂರು ಶಾಖೆಯ ವತಿಯಿಂದ ಸನ್ಮಾನಿಸಲಾಯಿತು.

ಬ್ರಹ್ಮಕುಮಾರೀಸ್ ಹುಬ್ಬಳ್ಳಿ ವಲಯದ ಹಿರಿಯ ಸಹೋದರಿ ರಾಜಯೋಗಿನಿ ಬ್ರಹ್ಮಕುಮಾರಿ ನಿರ್ಮಲಾ ಮಾತನಾಡಿ, ರೆಮೊನಾಳ ನೃತ್ಯ ಕೇವಲ ಕಲೆ ಅಲ್ಲ, ಅದು ಆತ್ಮದೊಳಗಿನ ಶುದ್ಧತೆ ಮತ್ತು ಪರಮಾತ್ಮದೊಂದಿಗೆ ಸಂಪರ್ಕ ಸಾಧಿಸುವ ಪ್ರೇರಕ ಪ್ರಾರ್ಥನೆ. ಅವರ ಸಾಧನೆ ಸಮಯದ ಮಿತಿಯನ್ನು ಮೀರಿ ನಡೆದ ಮನಸ್ಸಿನ ಉನ್ನತ ಪ್ರದರ್ಶನವಾಗಿದೆ ಎಂದರು.

**ರಾಜಯೋಗ ಧ್ಯಾನವೇ ಮೂಲ**

ಸನ್ಮಾನ ಸ್ವೀಕರಿಸಿ ಮಾತನಾಡಿದ ರೆಮೊನಾ ಪಿರೇರ, ಬ್ರಹ್ಮಕುಮಾರಿಸ್ ಪ್ರಧಾನ ಕಚೇರಿ ರಾಜಸ್ಥಾನ ಅಬು ಪರ್ವತಕ್ಕೆ ಕಳೆದ ವರ್ಷ ಭೇಟಿ ನೀಡಿದ್ದೆ. ತಮ್ಮ ಅನನ್ಯ ಸಾಧನೆಗೆ ಕಾರಣವಾದ ಶಕ್ತಿ , ಶಾಂತಿಗೆ ಬ್ರಹ್ಮಕುಮಾರೀಸ್‌ನ ರಾಜಯೋಗ ಧ್ಯಾನವೇ ಮೂಲವೆಂದು ತಿಳಿಸಿದರು. ತಾಯಿ-ತಂದೆ, ಗುರುಗಳು ಹಾಗೂ ಬ್ರಹ್ಮಕುಮಾರೀಸ್ ಕುಟುಂಬದ ಬೆಂಬಲದ ಜತೆಗೇ ದೈವೀ ಶಕ್ತಿ ತಮ್ಮ ಪ್ರಯಾಣದ ಹಿನ್ನೆಲೆಯಾಗಿದೆ ಎಂದು ಅವರು ಹೇಳಿದ್ದಾರೆ.

ಬ್ರಹ್ಮಕುಮಾರೀಸ್ ಮಂಗಳೂರು ಶಾಖೆಯ ಸಂಚಾಲಕ ಬ್ರಹ್ಮಕುಮಾರಿ ವಿಶ್ವೇಶ್ವರಿ, ಆಪ್ತ ಸಮಾಲೋಚಕಿ ರೇವತಿ, ಗಣ್ಯರು ಉಪಸ್ಥಿತರಿದ್ದರು.

Varthabharathi 05-08-2025

# ಇಂದು ನೃತ್ಯಪಟು ರೆಮೋನಾ ಪಿರೇರಾಗೆ ಅಭಿನಂದನೆ

ಉಡುಪಿ, ಆ.4: ಭರತನಾಟ್ಯದಲ್ಲಿ ನಿರಂತರ 7 ದಿನಗಳ ಪ್ರದರ್ಶನದೊಂದಿಗೆ ದೀರ್ಘಾವಧಿಯ ನೃತ್ಯದ ಮೂಲಕ 170 ಗಂಟೆಗಳ ಗೋಲ್ಡನ್ ಬುಕ್‌ಆಫ್ ವರ್ಲ್ಡ್ ರೆಕಾರ್ಡ್ ದಾಖಲಿಸಿದ ಮಂಗಳೂರು ಸಂತ ಅಲೋಶಿಯಸ್ ವಿವಿಯ ವಿದ್ಯಾರ್ಥಿನಿ ನೃತ್ಯಪಟು ರೆಮೋನಾ ಎವೆಟ್ ಪಿರೇರಾ ಅವರಿಗೆ ಆ.5ರಂದು ಸಂಜೆ 5ಕ್ಕೆ ಸಾರ್ವಜನಿಕ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಾಂಸ್ಕೃತಿಕ ಸಂಘಟನೆ ನಿರಂತರ್ ಉದ್ಯಾವರ ಹಾಗೂ ಲಯನ್ಸ್ ಕ್ಲಬ್‌ಉದ್ಯಾವರ ಸನ್ ಶೈನ್ ವತಿಯಿಂದ ಉದ್ಯಾವರ ಸಂತ ಫ್ರಾನ್ಸಿಸ್ ಝೇವಿಯರ್ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಸಂಚಾಲಕ ಸ್ಟೀವನ್ ಕುಲಾಸೊ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

Udayavani 05-08-2025

# ರೆಮೊನಾ ಪಿರೇರಾ ಅವರಿಗೆ ಸಮ್ಮಾನ



**ಮಹಾನಗರ, ಆ. 4:** ಯುವ ಪ್ರತಿಭೆ ರೆಮೊನಾ ಪಿರೇರಾ ಅವರು 170 ಗಂಟೆಗಳ ನಿರಂತರ ನೃತ್ಯ ಪ್ರದರ್ಶನದ ಮೂಲಕ ವಿಶ್ವದಾಖಲೆ ನಿರ್ಮಿಸಿರುವ ಹಿನ್ನೆಲೆಯಲ್ಲಿ ಬ್ರಹ್ಮಕುಮಾರೀಸ್ ಮಂಗಳೂರು ಶಾಖೆಯ ವತಿಯಿಂದ ಸಮ್ಮಾನ ಕಾರ್ಯಕ್ರಮ ನಡೆಯಿತು.

ಬ್ರಹ್ಮಕುಮಾರೀಸ್ ಹುಬ್ಬಳ್ಳಿವಲಯದ ಹಿರಿಯ ಸಹೋದರಿ ರಾಜಯೋಗಿನಿ ಬ್ರಹ್ಮ ಕುಮಾರಿ ನಿರ್ಮಲ ಮಾತನಾಡಿ, ರೆಮೊನಾಳ ನೃತ್ಯ ಕೇವಲ ಕಲೆ ಅಲ್ಲ, ಅದು ಆತ್ಮದೊಳಗಿನ ಶುದ್ಧತೆ ಮತ್ತು ಪರಮಾತ್ಮದೊಂದಿಗೆಸಂಪರ್ಕಸಾಧಿಸುವ ಪ್ರೇರಕ ಪ್ರಾರ್ಥನೆ. ಅವರ ಸಾಧನೆ ಸಮಯದ ಮಿತಿಯನ್ನು ಮೀರಿ ನಡೆದ ಮನಸ್ಸಿನ ಉನ್ನತ ಪ್ರದರ್ಶನವಾಗಿದೆ ಎಂದರು.

ಬ್ರಹ್ಮ ಕುಮಾರಿಸ್ ಪ್ರಧಾನ ಕಚೇರಿ ಆಬು ಪರ್ವತ ರಾಜಸ್ಥಾನಕ್ಕೆ ಕಳೆದ ವರ್ಷ ಭೇಟಿ ನೀಡಿದ ರೆಮೊನಾ ಪಿರೇರಾ ಅವರು ತಮ್ಮ ಅನನ್ಯ ಸಾಧನೆಗೆ ಕಾರಣವಾದ ಶಕ್ತಿ ಹಾಗೂ ಶಾಂತಿಗೆ ಬ್ರಹ್ಮಕುಮಾರೀಸ್‌ನ ರಾಜಯೋಗ ಧ್ಯಾನವೇ ಮೂಲವೆಂದು ತಿಳಿಸಿದರು.

ಮಂಗಳೂರು ಶಾಖೆಯ ಸಂಚಾಲಕರಾದ ಬ್ರಹ್ಮ ಕುಮಾರಿ ವಿಶ್ವೇಶ್ವರಿ, ಆಪ್ತ ಸಮಾಲೋಚಕಿ ರೇವತಿ, ನೃತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಗಣ್ಯರು, ನೂರಾರು ಅಭಿಮಾನಿಗಳು ಪಾಲ್ಗೊಂಡಿದ್ದರು.

Samyukta Karnataka 05-08-2025

# ಭರತನಾಟ್ಯ ವಿಶ್ವದಾಖಲೆಗೆ ಪ್ರೇರಣೆ

**ಸಂ.ಕ. ಸಮಾಚಾರ, ಮಂಗಳೂರು**

ನಾನು ಭರತನಾಟ್ಯದ ಮೂಲಕ ವಿಶ್ವದಾಖಲೆ ಮಾಡುವ ನನ್ನ ಸಾಧನೆಯ ಹಿಂದೆ ನನ್ನ ತಾಯಿಯು ಪ್ರೇರಣಾ ಶಕ್ತಿಯಾಗಿ ಪ್ರೋತ್ಸಾಹ ನೀಡಿದರು ಎಂದು ಸಾಧಕಿ ರೆಮೋನಾ ಎವೆಟ್ ಪಿರೇರಾ ಹೇಳಿದರು.

ಅವರು ತುಳುಭವನದಲ್ಲಿ ಭಾನುವಾರ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ಅಖಿಲ ಭಾರತ ಮುಂಡಾಲ ಯುವ ವೇದಿಕೆ ಜಂಟಿಯಾಗಿ ಆಯೋಜಿಸಿದ 'ಮರಿಯಲದ ತುಳುನಾಡ್' ವಿಷಯದ ಚಿತ್ರಕಲಾ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ತಾಯಿಯ ಪ್ರೇರಣೆಯೊಂದಿಗೆ ಭಗವಂತನ ಕೃಪೆ ಹಾಗೂ ಕಾಲೇಜಿನವರ ಸಹಕಾರ, ವಿದ್ಯಾರ್ಥಿ ಮಿತ್ರರ ಬೆಂಬಲದಿಂದ ನಾನು ಈ ಸಾಧನೆ ಮಾಡಲು ಸಾಧ್ಯವಾಯಿತು. ಈ ಸಾಧನೆಯ ಹಿಂದೆ ನನ್ನ ತುಂಬಾ ಪರಿಶ್ರಮವಿದೆ. ಅಂತಿಮ ಘಟ್ಟದಲ್ಲಿ ಸುಸ್ತಾಗಿರುವಂತೆ ಅನಿಸಿದರೂ ತಾಯಿಯ ಪ್ರೇರಣೆ ಹಾಗೂ ಭಗವಂತನ ಆಶೀರ್ವಾದದಿಂದ ಯಶಸ್ವಿಯಾಗಿ ವಿಶ್ವದಾಖಲೆಯನ್ನು ಪೂರೈಸಲು ಸಾಧ್ಯವಾಯಿತು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡ ಕರ್ನಾಟಕ ಲಲಿತಕಲಾ ಅಕಾಡೆಮಿಯ ವರ್ಣಶ್ರೀ ರಾಜ್ಯ ಪ್ರಶಸ್ತಿ ವಿಜೇತೆ ವೀಣಾ ಶ್ರೀನಿವಾಸ ಹಾಗೂ ಮಿಸ್ ಬ್ಯೂಟಿಫುಲ್ ಐಸ್ ಪ್ರಶಸ್ತಿ ಪಡೆದ ಮೈತ್ರಿ ಮಲ್ಲಿ ಅವರು ರೆಮೋನಾ ಎವೆಟ್ ಪಿರೇರಾ ಅವರನ್ನು ಸನ್ಮಾನಿಸಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸಿದ್ದರು.

ಡಾ.ಶಿವರಾಮ ಕಾರಂತ ಟ್ರಸ್ಟ್‌ನ ಸದಸ್ಯೆ ಅತ್ರಾಡಿ ಅಮೃತ ಶೆಟ್ಟಿ, ಬಿ.ಎ.ಖಾದರ್ ಷಾ, ಪ್ರದೀಪ್ ಕಾಪಿಕಾಡ್, ಶೋಭಾ, ಸುಪ್ರೀತಾ, ಅತಿಥಿಗಳಾದ ಶಕುಂತಲಾ ಎಸ್., ವಸಂತಿ ಜಯಪ್ರಕಾಶ್, ಪವಿತ್ರಾ ಕೆ., ಚೇತನಾ ರೋಹಿತ್ ಉಳ್ಳಾಲ್, ಮಲ್ಲಿಕಾ ರಘುರಾಜ್, ಕವಿತಾ ಶೈಲೇಶ್, ಪ್ರತಾಪ್, ಕಿರಣ್, ರಘುರಾಜ್ ಕದ್ರಿ, ರೆಮೋನಾ ಎವೆಟ್ ಪಿರೇರಾ ಅವರ ತಾಯಿ ಗ್ಲಾಡಿಸ್ ಪಿರೇರಾ, ಹರೀಶ್ ಕೊಡಿಯಾಲ್ ಬೈಲ್, ವಿಜಯ ಮಲ್ಲಿ ಮತ್ತಿತರರು ಉಪಸ್ಥಿತರಿದ್ದರು.




Vijayakarnatka 06-08-2025

# 'ಸಾಧನೆಯಿಂದ ಯಶಸ್ಸು ಸಾಧ್ಯ'



ಗೋಲ್ಡನ್ ಬುಕ್ ಆಫ್ ರೆಕಾರ್ಡ್ ಮಾಡಿದ ಸೌರಭ ನೃತ್ಯಕಲಾ ಪರಿಷತ್ ಸಂಸ್ಥೆಯ ಡಾ.ಶ್ರೀವಿದ್ಯಾರ ಶಿಷ್ಯೆ ರೆಮೋನಾ ಎವೆಟ್ ಪಿರೇರಾ ಅವರನ್ನು ಅಭಿನಂದಿಸಲಾಯಿತು.

■ **ವಿಕ ಸುದ್ದಿಲೋಕ** ಮಂಗಳೂರು

ಮನುಷ್ಯ ಸಾಧನೆಯಿಂದ ಏನನ್ನೂ ಸಾಧಿಸಬಹುದು. ರೆಮೋನಾ ಊಟ-ತಿಂಡಿ-ನಿದ್ರೆ ದೈನಂದಿನ ನಿತ್ಯ ಕಾರ್ಯಗಳನ್ನು ಹತೋಟಿಯಲ್ಲಿಟ್ಟುಕೊಂಡು ನೃತ್ಯ ಕ್ಷೇತ್ರದಲ್ಲಿ ಒಂದು ವಿಶೇಷ ಸಾಧನೆ ಮಾಡಿದ್ದು ಹೆಮ್ಮೆ ಹಾಗೂ ಜಿಲ್ಲೆಯ ಹೆಸರನ್ನು ಅಂತಾ ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಿದ್ದಾರೆ ಎಂದು ಶರವು ಕ್ಷೇತ್ರದ ಶಿಲೆ ಶಿಲೆ ಮೊಕ್ತೇಸರ ರಾಘವೇಂದ್ರ ಶಾಸ್ತ್ರಿ ಹೇಳಿದರು.

ಕರ್ನಾಟಕ ಕರಾವಳಿ ನೃತ್ಯ ಕಲಾ ಪರಿಷತ್ ವತಿಯಿಂದ ಮಂಗಳವಾರ ಆಯೋಜಿಸಿದ ನೃತ್ಯ ಕ್ಷೇತ್ರದಲ್ಲಿ ಸತತ 170 ಗಂಟೆಗಳ ಕಾಲ ಭರತನಾಟ್ಯ ಮ್ಯಾರಥಾನ್ ಮಾಡಿ ಗೋಲ್ಡನ್ ಬುಕ್ ರೆಕಾರ್ಡ್ ಮಾಡಿದ ಸೌರಭ ನೃತ್ಯಕಲಾ ಪರಿಷತ್ ಸಂಸ್ಥೆಯ ಡಾ. ಶ್ರೀವಿದ್ಯಾ ಅವರ ಶಿಷ್ಯೆ ರೆಮೋನಾ ಎವೆಟ್ ಪಿರೇರಾ ಅವರನ್ನು ಅಭಿನಂದಿಸಿ ಮಾತನಾಡಿದರು.

ಅಭಿನಂದನೆ ಸ್ವೀಕರಿಸಿ ರೆಮೋನಾ ಮಾತನಾಡಿ, ನನ್ನ ಯಶಸ್ಸಿನ ಹಿಂದೆ ತಾಯಿ ಮತ್ತು ಗುರುಗಳಲ್ಲದೆ ಜಿಲ್ಲೆಯ ಕಲಾಭಿಮಾನಿಗಳ ಆಶೀರ್ವಾದದಿಂದ ಇದು ಸಾಧ್ಯವಾಯಿತು ಎಂದರು. ಅಧ್ಯಕ್ಷೆ ರಾಜಶ್ರೀ ಉಳ್ಳಾಲ್ ಅಭಿನಂದನೆಯ ಮಾತುಗಳನ್ನಾಡಿದರು. ಕೋಶಾಧಿಕಾರಿ ವಿದ್ವಾನ್ ಸುರೇಶ್ ಅತ್ತಾವರ, ಉಪಾಧ್ಯಕ್ಷ ವಿದ್ವಾನ್ ಚಂದ್ರಶೇಖರ ನಾವಡ, ಟ್ರಸ್ಟಿಗಳಾದ ವಿದ್ವಾನ್ ಪ್ರವೀಣ್ ಯು.ಕೆ., ವಿದುಷಿ ನಯನ ವಿ. ರೈ ಪುತ್ತೂರು. ಸದಸ್ಯರಾದ ವಿದ್ವಾನ್ ಸುದರ್ಶನ್, ದೀಪಕ್ ಕುಮಾರ್ ಪುತ್ತೂರು, ಭವಾನಿ ಶಂಕರ ಉಡುಪಿ, ವಿದುಷಿಯರಾದ ಮಂಜುಳಾ ಸುಬ್ರಹ್ಮಣ್ಯ, ಸವಿತಾ ಜೀವನ್, ಲತಾ ಶಶಿಧರ್, ವಿದ್ಯಾಶ್ರೀ ರಾಧಾಕೃಷ್ಣ ಹಾಗೂ ಹಿರಿಯ ಕಿರಿಯ ನೃತ್ಯ ಗುರುಗಳು ಉಪಸ್ಥಿತರಿದ್ದರು. ಪರಿಷತ್ ನ ಕಾರ್ಯದರ್ಶಿ ವಿದುಷಿ ಶಾರದಾಮಣಿ ಶೇಖರ್ ಸ್ವಾಗತಿಸಿದರು. ಜತೆ ಕಾರ್ಯದರ್ಶಿ ಶ್ರೀಧರ ಹೊಳ್ಳ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

Hosadigantha 14-08-2025

# ರೋಟರಿ ಕ್ಲಬ್‌ನಿಂದ ವಿಠಲ ಕಿಣಿ, ರೆಮೋನಾ ಇವೇಟ್ ಪಿರೇರಾಗೆ ಸನ್ಮಾನ



**ಭರತ ನಾಟ್ಯದಲ್ಲಿ ದಾಖಲೆ ಮಾಡಿದ ಕಲಾವಿದೆ ರೆಮೋನಾ ಇವೇಟ್ ಪಿರೇರಾ ಮತ್ತು ಸ್ವಾತಂತ್ರ್ಯ ಹೋರಾಟಗಾರ ವಿಠಲ ಕಿಣಿಯವರಿಗೆ ಗೌರವ ಸನ್ಮಾನ**

**ಮಂಗಳೂರು** : ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ವತಿಯಿಂದ ನಗರದ ಬಲ್ಲಾಳ ಅತ್ರಿಯಲ್ ಪಿಲ್ಲಾದಲ್ಲಿ ಹಮ್ಮಿಕೊಂಡ ಆಟಿ ಸಂಭ್ರಮ ಕಾರ್ಯಕ್ರಮದಲ್ಲಿ ಭರತ ನಾಟ್ಯದಲ್ಲಿ ದಾಖಲೆ ಮಾಡಿದ ಕಲಾವಿದೆ ರೆಮೋನಾ ಇವೇಟ್ ಪಿರೇರಾ ಮತ್ತು ಸ್ವಾತಂತ್ರ್ಯ ಹೋರಾಟಗಾರ ವಿಠಲ ಕಿಣಿಯವರಿಗೆ ಗೌರವ ಸನ್ಮಾನ ನಡೆಯಿತು.

ಎನ್‌ಆರ್‌ಐ ಇಂಜಿನಿಯರ್ ಮಂಜೇಶ್ವರ ಮೋಹನ್ ದಾಸ್ ಕಾಮತ್, ಮಾಜಿ ಮೇಯರ್, ಕಾರ್ಪೋರೇಟ್ ಸ್ಪೆಷಾಲಿಟಿ ಕೆಮಿಕಲ್ ಇಂಡಿಯಾದ ಜನರಲ್ ಮ್ಯಾನೇಜರ್ ದಿವಾಕರ್, ಛಾಯಾಗ್ರಾಹಕ ಅಮ್ಮ ಮಂಗಳೂರು, ಕ್ಲಬ್‌ನ ಮಾಜಿ ಗವರ್ನರ್ ಸಿಎ ಎಸ್.ಎಸ್. ನಾಯಕ್, ಮಾಜಿ ಗವರ್ನರ್ ಡಾ.ದೇವದಾಸ್ ರೈ, ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಅಧ್ಯಕ್ಷ ಭಾಸ್ಕರ್ ರೈ ಕಟ್ಟ, ಡಾ. ಅವಿನ್ ಆಳ್ವ ನಾಗೇಂದ್ರ, ಮಾಜಿ ಅಸಿಸ್ಟೆಂಟ್ ಗವರ್ನರ್ ರಾಜ್ ಗೋಪಾಲ್ ರೈ, ಶಲ್ ಧಾನ್ ಕ್ರಾಸ್ತಾ, ಜಾಕ್ಸನ್ ಸಲ್ಡಾನ, ಡೆರಿಲ್ ಸ್ಟೀವನ್ ಡಿಸೋಜಾ, ಅಶ್ವಿನ್ ಸಿಕ್ವೇರಾ, ವಲಯ ಸೇನಾನಿ ರವಿ ಜಲನ್, ಸ್ಥಾಪಕ ಸದಸ್ಯ ಸತೀಶ್ ಪೈ ನಿಕಟ ಪೂರ್ವ ಅಸಿಸ್ಟೆಂಟ್ ಗವರ್ನರ್ ಕೆಎಂ ಹೆಗಡೆ ಮೊದಲಾದವರು ಉಪಸ್ಥಿತರಿದ್ದರು.

Hosadigantha 05-08-2025

## ವಿನೋಲಾ ಸಾಂಡ್ರಾ ಸಿಕ್ವೇರಾಗೆ ಪಿಎಚ್‌ಡಿ ಪದವಿ

**ಮಂಗಳೂರು:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕಲಾ ಮತ್ತು ಮಾನವಿಕ ಶಾಲೆಯ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವಿನೋಲಾ ಸಾಂಡ್ರಾ ಸಿಕ್ವೇರಾ ಅವರ 'ಮಹಿಳಾ ಮತ್ತು ಮಕ್ಕಳ ಆರೋಗ್ಯ ಸೇವೆಗಳು – ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲೇಖದೊಂದಿಗೆ ಒಂದು ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿಯನ್ನು ನೀಡಿ ಗೌರವಿಸಿದೆ. ಇವರು ಮಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಶ್ರೀಪತಿ ಕಲ್ಲೂರಾಯ ಪಿ. ಅವರ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ವಿನೋಲಾರವರು ಕಿನ್ನಿಗೋಳಿಯ ವಿನ್ಸೆಂಟ್ ಸಿಕ್ವೇರಾ ಮತ್ತು ಏಂಜೆಲಿನ್ ಸಿಕ್ವೇರಾ ಅವರ ಪುತ್ರಿ ಮತ್ತು ಕಾರ್ಕಳದ ಬೆಳ್ಮಣ್‌ನ ರೋವೆನ್ ಪ್ರೇಮ್ ಡಿಸಿಲ್ವಾ ಅವರ ಪತ್ನಿ.



Vijayakarnataka 05-08-2025

## ವಿನೋಲಾ ಸಾಂಡ್ರಾಗೆ ಪಿಎಚ್‌ಡಿ



**ಮಂಗಳೂರು:** ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕಲಾ ಮತ್ತು ಮಾನವಿಕ ಶಾಲೆಯ ಅರ್ಥಶಾಸ್ತ್ರ ವಿಭಾ ಗದ ಸಹಾಯಕ ಪ್ರಾಧ್ಯಾಪಕಿ ವಿನೋಲಾ ಸಾಂಡ್ರಾ ಸಿಕ್ವೇರಾ ಮಂಡಿಸಿದ 'ಮಹಿಳಾ ಮತ್ತು ಮಕ್ಕಳ ಆರೋಗ್ಯ ಸೇವೆಗಳು-ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲೇಖದೊಂದಿಗೆ ಒಂದು ಅಧ್ಯಯನ' ಮಹಾ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯ ಪಿಎಚ್‌ಡಿ ನೀಡಿ ಗೌರವಿಸಿದೆ.

ಮಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಶ್ರೀಪತಿ ಕಲ್ಲೂರಾಯ ಪಿ. ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ಇವರು ಕಿನ್ನಿಗೋಳಿಯ ವಿನ್ಸೆಂಟ್ ಸಿಕ್ವೇರ ಹಾಗೂ ಏಂಜೆಲಿನ್ ಸಿಕ್ವೇರ ಅವರ ಪುತ್ರಿ ಮತ್ತು ಬೆಳ್ಮಣ್‌ನ ರೋವೆನ್ ಪ್ರೇಮ್ ಡಿಸಿಲ್ವ ಅವರ ಪತ್ನಿ.

Udyavani 06-08-2025

## ವಿನೋಲಾ ಸಾಂಡ್ರಾ ಸಿಕ್ವೇರಾ ಅವರಿಗೆ ಪಿಎಚ್.ಡಿ

**ಮಹಾನಗರ, ಆ.5:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕಲಾ ಮತ್ತು ಮಾನವಿಕ ಶಾಲೆಯ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವಿನೋಲಾ ಸಾಂಡ್ರಾ ಸಿಕ್ವೇರಾ ಅವರು ಮಂಡಿಸಿದ 'ಮಹಿಳಾ ಮತ್ತು ಮಕ್ಕಳ ಆರೋಗ್ಯ ಸೇವೆಗಳು – ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲೇಖದೊಂದಿಗೆ ಒಂದು ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿ ನೀಡಿದೆ. ಮಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ| ಶ್ರೀಪತಿ ಕಲ್ಲೂರಾಯ ಪಿ. ಅವರ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ಕಿನ್ನಿಗೋಳಿಯ ವಿನ್ಸೆಂಟ್ ಸಿಕ್ವೇರಾ ಮತ್ತು ಏಂಜೆಲಿನ್ ಸಿಕ್ವೇರಾ ಅವರ ಪುತ್ರಿ.



Varthabharathi 06-08-2025

## ವಿನೋಲಾ ಸಾಂಡ್ರಾಗೆ ಪಿಎಚ್‌ಡಿ ಪದವಿ

ಮಂಗಳೂರು, ಆ.5: ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕಲಾ ಮತ್ತು ಮಾನವಿಕ ಶಾಲೆಯ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವಿನೋಲಾ ಸಾಂಡ್ರಾ ಸಿಕ್ವೇರ ಅವರ 'ಮಹಿಳಾ ಮತ್ತು ಮಕ್ಕಳ ಆರೋಗ್ಯ ಸೇವೆಗಳು-ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲೇಖದೊಂದಿಗೆ ಒಂದು ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯವು ಪಿಎಚ್‌ಡಿ ಪದವಿಯನ್ನು ನೀಡಿ ಗೌರವಿಸಿದೆ.



ಇವರು ಮಂಗಳೂರು ವಿವಿಯ ಅರ್ಥಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.(ಡಾ)ಶ್ರೀಪತಿ ಕಲ್ಲೂರಾಯ ಪಿ. ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದಾರೆ. ವಿನೋಲಾ ಕಿನ್ನಿಗೋಳಿಯ ವಿನ್ಸೆಂಟ್ ಸಿಕ್ವೇರ ಮತ್ತು ಏಂಜೆಲಿನ್ ಸಿಕ್ವೇರ ದಂಪತಿಯ ಪುತ್ರಿ ಮತ್ತು ಕಾರ್ಕಳದ ಬೆಳ್ಮಣ್‌ನ ರೋವೆನ್ ಪ್ರೇಮ್ ಡಿಸಿಲ್ವಾರ ಪತ್ನಿ.

Vijaya Karnataka 11-08-2025

## ನಿವೇದಿತಾಗೆ ಪಿಎಚ್‌ಡಿ

**ಮಂಗಳೂರು:** ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ವಾಣಿಜ್ಯ ಸ್ನಾತಕೋತ್ತರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ನಿವೇದಿತಾ ಅವರು ಮಂಡಿಸಿದ 'ಇಂಪ್ಯಾಕ್ಟ್ ಆಫ್ ಲಾರ್ಜ್‌ಸ್ಕೇಲ್ ರಿಟೈಲಿಂಗ್ ಆನ್ ಕನ್ಸ್ಯೂಮರ್ ಆ್ಯಂಡ್ ಸ್ಮಾಲ್ ಟ್ರೇಡರ್ಸ್: ಎ ಸ್ಟಡಿ ವಿತ್ ರೆಫರೆನ್ಸ್ ಟು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್' ಎಂಬ ಮಹಾ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯ ಪಿಎಚ್‌ಡಿ ನೀಡಿದೆ.



ಯುನಿವರ್ಸಿಟಿ ಕಾಲೇಜು ಮಂಗಳೂರಿನ ವಾಣಿಜ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಡಾ. ಯತೀಶ್ ಕುಮಾರ್ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ನಿವೇದಿತಾ ಅವರು ಎಕ್ಕೂರಿನ ಡಾ.ಅವಿನಾಶ್ ಅವರ ಪತ್ನಿ, ಉರ್ವ ಕೋಡಿಗುರಿಯ ಸುಧಾಕರ್ ಹಾಗೂ ಪುಷ್ಪಾ ಅವರ ಪುತ್ರಿ.

Vijayavani 12-08-2025

## ಅನುಪ್ರಿಯ ಶೆಟ್ಟಿಗೆ ಪಿಎಚ್.ಡಿ ಪದವಿ

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿವಿಯ ಸ್ಕೂಲ್ ಆಫ್ ಫಿಸಿಕಲ್ ಸೈನ್ಸಸ್‌ನ ಗಣಿತ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಮತ್ತು ಮುಖ್ಯಸ್ಥೆ ಅನುಪ್ರಿಯಾ ಶೆಟ್ಟಿ ಅವರ, 'ಎ ಸ್ಟಡಿ ಆನ್ ಸೆಟ್ಸ್ ವಿತ್ ಮೋರ್ ಪ್ರಾಡಕ್ಟ್ಸ್ ದ್ಯಾನ್ ಕೋಷಿಯಂಟ್ಸ್' ಎಂಬ ಮಹಾಪ್ರಬಂಧಕ್ಕಾಗಿ ಸುರತ್ಕಲ್ ಎನ್‌ಐಟಿಕೆ ಪಿಎಚ್.ಡಿ ಪದವಿ ನೀಡಿದೆ. ಸುರತ್ಕಲ್‌ನ ಎನ್‌ಐಟಿಕೆ ಗಣಿತ ಮತ್ತು ಕಂಪ್ಯೂಟೇಶನಲ್ ಸೈನ್ಸಸ್ ವಿಭಾಗದ ಪ್ರಾಧ್ಯಾಪಕ ಡಾ.ಶಂಕರ್ ಬಿ.ಆರ್. ಅವರ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ಮಂಗಳೂರು ಜಪ್ಪಿನಮೊಗರುವಿನ ವೆಂಕಪ್ಪ ಶೆಟ್ಟಿ ಮತ್ತು ಶಶಿಕಲಾ ಶೆಟ್ಟಿ ಅವರ ಪುತ್ರಿ ಮತ್ತು ಎಂಆರ್‌ಪಿಎಲ್‌ನ ಮೆಟೀರಿಯಲ್ಸ್ ವಿಭಾಗದ ಜೂನಿಯರ್ ಅಧಿಕಾರಿ ಲೋಕೇಶ್ ಶೆಟ್ಟಿ ಅವರ ಪತ್ನಿ.



Vijayakarnataka 14-08-2025

## ಅನುಪ್ರಿಯ ಶೆಟ್ಟಿಗೆ ಪಿಎಚ್‌ಡಿ

**ಮಂಗಳೂರು:** ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಫಿಸಿಕಲ್ ಸೈನ್ಸಸ್‌ನ ಗಣಿತ ವಿಭಾಗದ ಮುಖ್ಯಸ್ಥೆ ಹಾಗೂ ಸಹಾಯಕ ಪ್ರಾಧ್ಯಾಪಕಿ ಅನುಪ್ರಿಯಾ ಶೆಟ್ಟಿ ಅವರ ಮಹಾ ಪ್ರಬಂಧಕ್ಕೆ ಸುರತ್ಕಲ್‌ನ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಪಿಎಚ್‌ಡಿ ನೀಡಿದೆ.



ಅವರು ಸುರತ್ಕಲ್‌ನ ಎನ್‌ಐಟಿಕೆಯ ಗಣಿತ ಮತ್ತು ಕಂಪ್ಯೂಟೇಶನಲ್ ಸೈನ್ಸಸ್ ವಿಭಾಗದ ಪ್ರಾಧ್ಯಾಪಕ ಡಾ. ಶಂಕರ್ ಬಿ.ಆರ್. ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ಅವರು ಮಂಗಳೂರಿನ ಜಪ್ಪಿನಮೊಗರಿನ ವೆಂಕಪ್ಪ ಶೆಟ್ಟಿ ಮತ್ತು ಶಶಿಕಲಾ ಶೆಟ್ಟಿ ಅವರ ಪುತ್ರಿ ಮತ್ತು ಎಂಆರ್‌ಪಿಎಲ್‌ನ ಮೆಟೀರಿಯಲ್ಸ್ ವಿಭಾಗದ ಜೂನಿಯರ್ ಅಧಿಕಾರಿ ಲೋಕೇಶ್ ಶೆಟ್ಟಿ ಅವರ ಪತ್ನಿ.

Udayavani 15-08-2025

## ನಿವೇದಿತಾ ಅವರಿಗೆ ಪಿಎಚ್.ಡಿ.

**ಮಹಾನಗರ, ಆ. 14:** ಮಂಗಳೂರು ವಿ.ವಿ.ದ ವಾಣಿಜ್ಯ ವಿಭಾಗದ ಸಂಶೋಧನ ವಿದ್ಯಾರ್ಥಿನಿ, ಸಂತ ಅಲೋಶಿಯಸ್ ಪರಿಗಣಿತ ವಿ.ವಿ. ವಾಣಿಜ್ಯ ಸ್ನಾತಕೋತ್ತರ ವಿಭಾಗದ ಸಹಾ ಯಕ ಪ್ರಾಧ್ಯಾಪಿಕೆ ನಿವೇದಿತಾ ಅವರು ಮಂಡಿಸಿದ 'ಇಂಪ್ಯಾಕ್ಟ್ ಆಫ್ ಲಾರ್ಜ್ ಸ್ಕೇಲ್ ರಿಟೈಲಿಂಗ್ ಆನ್ ಕನ್ಸ್ಯೂಮರ್ಸ್ ಆ್ಯಂಡ್ ಸ್ಮಾಲ್ ಟ್ರೇಡರ್ಸ್: ಎ ಸ್ಟಡಿ ವಿತ್ ರೆಫರೆನ್ಸ್ ಟು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್' ಎಂಬ ಮಹಾ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ನೀಡಿದೆ. ವಿ.ವಿ. ಕಾಲೇಜಿನ ಪ್ರಾಧ್ಯಾಪಕ ಡಾ| ಯತೀಶ್ ಕುಮಾರ್ ಅವರ ಮಾರ್ಗದರ್ಶನ ನೀಡಿದರು. ಅವರು ಡಾ| ಅವಿನಾಶ್ ಅವರ ಪತ್ನಿ



Udayavani 14-08-2025

## ಅನುಪ್ರಿಯ ಶೆಟ್ಟಿ ಅವರಿಗೆ ಪಿಎಚ್.ಡಿ.

**ಮಹಾನಗರ, ಆ. 13:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಫಿಸಿಕಲ್ ಸೈನ್ಸಸ್‌ನ ಗಣಿತ ವಿಭಾಗದ ಸಹಾಯಕ ಪ್ರಾಧ್ಯಾಪಿಕೆ ಮತ್ತು ಮುಖ್ಯಸ್ಥೆ ಅನುಪ್ರಿಯಾ ಶೆಟ್ಟಿ ಅವರು ಮಂಡಿಸಿದ 'ಎ ಸ್ಟಡಿ ಆನ್ ಸೆಟ್ಸ್ ವಿತ್ ಮೋರ್ ಪ್ರಾಡಕ್ಟ್ಸ್ ದ್ಯಾನ್ ಕೋಷಿಯಂಟ್ಸ್' ಎಂಬ ಮಹಾ ಪ್ರಬಂಧಕ್ಕಾಗಿ ಸುರತ್ಕಲ್‌ನ ಎನ್‌ಐಟಿಕೆಯಿಂದ ಪಿಎಚ್.ಡಿ. ಪಡೆದಿದ್ದಾರೆ. ಅವರು ಎನ್‌ಐಟಿಕೆಯ ಗಣಿತ ಮತ್ತು ಕಂಪ್ಯೂಟೇಶನಲ್ ಸೈನ್ಸಸ್ ವಿಭಾಗದ ಪ್ರಾಧ್ಯಾಪಕ ಡಾ| ಶಂಕರ್ ಬಿ.ಆರ್. ಅವರ ಮಾರ್ಗದರ್ಶನದಲ್ಲಿ ಈ ಪ್ರಬಂಧ ಮಂಡಿಸಿದ್ದಾರೆ. ಜಪ್ಪಿನಮೊಗರುವಿನ ವೆಂಕಪ್ಪ ಶೆಟ್ಟಿ ಮತ್ತು ಶಶಿಕಲಾ ಶೆಟ್ಟಿ ದಂಪತಿಯ ಪುತ್ರಿ.



Time of India 05-08-2025



**GETTING READY:** AV Ramana, NMPA chairman, launches the T-shirts on Monday for The New Mangalore Port Authority Golden Jubilee 10K Run which is scheduled for Aug 31

## Golden Jubilee 10K Run: Ball set rolling

The New Mangalore Port Authority (NMPA) Golden Jubilee 10K Run was officially launched on Monday at the Business Development Centre, NMPA, marking the beginning of a fitness initiative to commemorate 50 years of NMPA's service to the nation. The key highlights of the launch included the unveiling of the official event logo, promotional film, specially curated route video, and event website for registrations and updates. The run, having three categories—10K, 5K, and 3K, is scheduled for Aug 31 from 6am onwards. The event is being executed by Sports Reconnect, a sports management company, and is presented by NMPA and other stakeholders.

Vijayakarnataka 05-08-2025

## ಎನ್‌ಎಂಪಿಎ 10ಕೆ ಓಟಕ್ಕೆ ಅಧಿಕೃತ ಚಾಲನೆ



ಎನ್‌ಎಂಪಿಎ 50ನೇ ವರ್ಷಾಚರಣೆ ಪ್ರಯುಕ್ತ ಆಯೋಜಿಸಲಾಗಿರುವ 10ಕೆ ಓಟಕ್ಕೆ ಸೋಮವಾರ ಡಾ.ಎ.ವಿ.ಅಕ್ಕರಾಜು ಚಾಲನೆ ನೀಡಿದರು.

**ಸುರತ್ಕಲ್:** ಎನ್‌ಎಂಪಿಎನ 50ನೇ ವರ್ಷಾಚರಣೆ ಪ್ರಯುಕ್ತ ಆಯೋಜಿಸಲಾಗಿರುವ 10ಕೆ (10 ಕಿ.ಮೀ.) ಓಟಕ್ಕೆ ಸೋಮವಾರ ಎನ್‌ಎಂಪಿಎ ಬಿಡಿಸಿ ಹಾಲ್‌ನಲ್ಲಿ ಅಧ್ಯಕ್ಷ ಡಾ. ಎ.ವಿ. ಅಕ್ಕರಾಜು ಚಾಲನೆ ನೀಡಿದರು.

ಎಂಆರ್‌ಪಿಎಲ್ ಎಂಡಿ ಶ್ಯಾಮ್‌ಪ್ರಸಾದ್ ಮುಂಡ್ಕೂರು, ಎನ್‌ಎಂಪಿಎ ಉಪಾಧ್ಯಕ್ಷೆ ಎಸ್. ಶಾಂತಿ, ಶ್ರೀನಿವಾಸ ವಿವಿ ಉಪ ಕುಲಪತಿ ಡಾ.ಎ.ಶ್ರೀನಿವಾಸ ರಾವ್, ಸೈಂಟ್ ಅಲೋಶಿಯಸ್ ಕಾಲೇಜು ಉಪಕುಲಪತಿ ರೆ. ಡಾ. ಪ್ರವೀಣ್ ಮಾರ್ಟಿಸ್, ಮಂಗಳೂರು ಬಿಎನ್‌ಐ ನಿರ್ದೇಶಕ ಗಣೇಶ್ ಎನ್. ಶರ್ಮ, ಎನ್‌ಎಂಪಿಎ ಸಿಇಒ ಪದ್ಮನಾಭಾಚಾರ್, ರಾಷ್ಟ್ರಮಟ್ಟದ ಅಲ್ಟ್ರಾ ಮ್ಯಾರಥಾನ್ ಓಟಗಾರ ಸತೀಶ್ ಗುಜರನ್ ಮತ್ತಿತರರಿದ್ದರು.

ಆ.31ರಂದು ಬೆಳಗ್ಗೆ 6ರಿಂದ 10ಕೆ, 5ಕೆ, 3ಕೆ ಈ ವಿಭಾಗಗಳಲ್ಲಿ ಓಟ ನಡೆಯಲಿದೆ ಎಂದು ಎನ್‌ಎಂಪಿಎ ಪ್ರಕಟಣೆ ತಿಳಿಸಿದೆ.

Kannada Prabha 05-08-2025

## 31ರಂದು ಎನ್‌ಎಂಪಿಎ ಗೋಲ್ಡನ್ ಜ್ಯುಬಿಲಿ ರನ್

- ಬೆಳಗ್ಗೆ 6ರಿಂದ 10ಕೆ, 5ಕೆ, 3ಕೆ ಓಟ ಎಂಬ 3 ವಿಭಾಗಗಳಲ್ಲಿ ಗೋಲ್ಡನ್ ಜ್ಯುಬಿಲಿ ರನ್ ನಡೆಯಲಿದೆ.
- ಆರೋಗ್ಯ, ಫಿಟ್‌ನೆಸ್ ಮತ್ತು ಸಮುದಾಯ ಭಾಗವಹಿಸುವಿಕೆ ಉದ್ದೇಶ.



ಎನ್‌ಎಂಪಿಎ ಗೋಲ್ಡನ್ ಜ್ಯುಬಿಲಿ ರನ್‌ಗಾಗಿ ಟಿಶರ್ಟ್ ಬಿಡುಗಡೆಗೊಳಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಮಂಗಳೂರು

ನವ ಮಂಗಳೂರು ಬಂದರು ಪ್ರಾಧಿಕಾರದ ವ್ಯಾಪಾರ ಅಭಿವೃದ್ಧಿ ಕೇಂದ್ರದಲ್ಲಿ ಸೋಮವಾರ ನಡೆದ ಸಭೆಯಲ್ಲಿ 'ಎನ್‌ಎಂಪಿಎ ಗೋಲ್ಡನ್ ಜುಬಿಲಿ 10ಕೆ ರನ್'ನ್ನು ಅಧಿಕೃತವಾಗಿ ಘೋಷಿಸಲಾಯಿತು.

ಆಗಸ್ಟ್ 31 ರಂದು ಬೆಳಗ್ಗೆ 6ರಿಂದ 10ಕೆ, 5ಕೆ, 3ಕೆ ಓಟ ಎಂಬ 3 ವಿಭಾಗಗಳಲ್ಲಿ ಗೋಲ್ಡನ್ ಜ್ಯುಬಿಲಿ ರನ್ ನಡೆಯಲಿದ್ದು, ಈ ಓಟವು ಕರಾವಳಿ ಕರ್ನಾಟಕದ ಜನರನ್ನು ಆರೋಗ್ಯ, ಫಿಟ್‌ನೆಸ್ ಮತ್ತು ಸಮುದಾಯ ಭಾಗವಹಿಸುವಿಕೆಯಲ್ಲಿ ತೊಡಗಿಸಿಕೊಳ್ಳುವ ಗುರಿಯನ್ನು ಹೊಂದಿದೆ.

ಸಭೆಯಲ್ಲಿ ಎನ್‌ಎಂಪಿಎ ಅಧ್ಯಕ್ಷ ಡಾ.ಎ.ವಿ. ರಮಣ, ಎಂಆರ್‌ಪಿಎಲ್ ಎಂಡಿ ಮುಂಡ್ಕೂರು ಶ್ಯಾಮ ಪ್ರಸಾದ್ ಕಾಮತ್, ಎನ್‌ಎಂಪಿಎ ಡೆಪ್ಯೂಟಿ ಚೇರ್ಮನ್ ಎಸ್.ಶಾಂತಿ, ಶ್ರೀನಿವಾಸ ವಿವಿ ಪ್ರೊ ಚಾನ್ಸಲರ್ ಡಾ.ಎ. ಶ್ರೀನಿವಾಸ ರಾವ್, ಸೈಂಟ್ ಅಲೋಶಿಯಸ್ ಕಾಲೇಜಿನ ಉಪಕುಲಪತಿ ರೆ. ಡಾ. ಪ್ರವೀಣ್ ಮಾರ್ಟಿಸ್, ಬಿಎನ್‌ಐ ಮಂಗಳೂರಿನ ಕಾರ್ಯ ನಿರ್ವಾಹಕ ನಿರ್ದೇಶಕ ಗಣೇಶ ಎನ್. ಶರ್ಮ ಮತ್ತಿತರರು ಇದ್ದರು.

## Hosadigantha 05-08-2025

### ‘ಎನ್‌ಎಂಪಿಎ ಗೋಲ್ಡನ್ ಜುಬಿಲಿ 10ಕೆ ರನ್’ ಘೋಷಣೆ



• **ಮಂಗಳೂರು:** ನವ ಮಂಗಳೂರು ಬಂದರು ಪ್ರಾಧಿಕಾರದ ವ್ಯಾಪಾರ ಅಭಿವೃದ್ಧಿ ಕೇಂದ್ರದಲ್ಲಿ ಸೋಮವಾರ ನಡೆದ ಸಭೆಯಲ್ಲಿ 'ಎನ್‌ಎಂಪಿಎ ಗೋಲ್ಡನ್ ಜುಬಿಲಿ 10ಕೆ ರನ್'ನ್ನು ಅಧಿಕೃತವಾಗಿ ಘೋಷಿಸಲಾಯಿತು.

ಆ.31 ರಂದು ಬೆಳಗ್ಗೆ 6ರಿಂದ 10ಕೆ, 5ಕೆ, 3ಕೆ ಓಟ ಎಂಬ 3 ವಿಭಾಗಗಳಲ್ಲಿ ಗೋಲ್ಡನ್ ಜ್ಯುಬಿಲಿ ರನ್ ನಡೆಯಲಿದ್ದು, ಈ ಓಟವು ಕರಾವಳಿ ಕರ್ನಾಟಕದ ಜನರನ್ನು ಆರೋಗ್ಯ, ಫಿಟ್‌ನೆಸ್ ಮತ್ತು ಸಮುದಾಯ ಭಾಗವಹಿಸುವಿಕೆಯಲ್ಲಿ ತೊಡಗಿಸಿಕೊಳ್ಳುವ ಗುರಿಯನ್ನು ಹೊಂದಿದೆ. ಸಭೆಯಲ್ಲಿ ಎನ್‌ಎಂಪಿಎ ಅಧ್ಯಕ್ಷ ಡಾ.ಎ.ವಿ. ರಮಣ, ಎಂಆರ್‌ಪಿಎಲ್ ಎಂಡಿ ಮುಂಡ್ಕೂರು ಶ್ಯಾಮ ಪ್ರಸಾದ್ ಕಾಮತ್, ಎನ್‌ಎಂಪಿಎ ಡೆಪ್ಯೂಟಿ ಚೇರ್ಮನ್ ಎಸ್.ಶಾಂತಿ, ಶ್ರೀನಿವಾಸ ವಿವಿ ಪ್ರೊ ಚಾನ್ಸಲರ್ ಡಾ.ಎ. ಶ್ರೀನಿವಾಸ ರಾವ್, ಸೈಂಟ್ ಅಲೋಶಿಯಸ್ ಕಾಲೇಜಿನ ಉಪಕುಲಪತಿ ರೆ.ಡಾ. ಪ್ರವೀಣ್ ಮಾರ್ಟಿನ್, ಬಿಎನ್‌ಐ ಮಂಗಳೂರಿನ ಕಾರ್ಯ ನಿರ್ವಾಹಕ ನಿರ್ದೇಶಕ ಗಣೇಶ ಎನ್. ಶರ್ಮ ಮತ್ತಿತರರು ಉಪಸ್ಥಿತರಿದ್ದರು.

## Vijayavani 05-08-2025



ಎನ್‌ಎಂಪಿಎ ಸುವರ್ಣ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಆ.31ರಂದು 10 ಕಿ.ಮೀ. ಮ್ಯಾರಥಾನ್ ನಡೆಯಲಿದ್ದು, ಸೋಮವಾರ ಲೋಗೋ, ಪ್ರೋಮೊ, ಟಿ-ಶರ್ಟ್ ಬಿಡುಗಡೆ ನಡೆಯಿತು. ಎನ್‌ಎಂಪಿಎ ಅಧ್ಯಕ್ಷ ಡಾ.ವೆಂಕಟರಮಣ ಅಕ್ಕರಾಜು, ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಮುಂಡ್ಕೂರು ಶ್ಯಾಮಪ್ರಸಾದ್ ಕಾಮತ್, ಕುಲಪತಿ ಡಾ.ಫಾ.ಪ್ರವೀಣ್ ಮಾರ್ಟಿಸ್, ಎನ್‌ಎಂಪಿಎ ಡೆಪ್ಯುಟಿ ಚೇರ್‌ಮೆನ್ ಶಾಂತಿ ಎಸ್, ಎನ್‌ಎಂಪಿಎ ಚೀಫ್ ವಿಜಿಲೆನ್ಸ್ ಆಫೀಸರ್ ಪದ್ಮನಾಭ ಆಚಾರ್, ಶ್ರೀನಿವಾಸ ವಿವಿ ಸಹಕುಲಾಧಿಪತಿ ಡಾ.ಎ.ಶ್ರೀನಿವಾಸ ರಾವ್, ಬಿಐಎನ್‌ಐ ಮಂಗಳೂರು ಎಕ್ಸಿಕ್ಯೂಟಿವ್ ಡೈರೆಕ್ಟರ್ ಗಣೇಶ್ ಶರ್ಮ, ಕ್ರೀಡಾ ಸಾಧಕ ಸತೀಶ್ ಗುಜರನ್ ಮತ್ತಿತರರು ಉಪಸ್ಥಿತರಿದ್ದರು.

## Indian Express 05-08-2025

# Countdown to NMPA Golden Jubilee 10K Run begins

**EXPRESS NEWS SERVICE**
@ Mangaluru

THE NMPA Golden Jubilee 10K Run was officially launched on Monday, marking the beginning of a landmark fitness initiative to commemorate 50 glorious years of New Mangalore Port Authority (NMPA)'s service to the nation.

Dr. A. V. Ramana, Chairman, NMPA, Mundkur Shyamprasad Kamath, Managing Director of MRPL, S. Shanthi, NMPA Dy. Chairperson, Dr. A. Srinivasa Rao, Pro Chancellor, Srinivas University, Rev Dr Praveen Martis S J, Vice Chancellor, St. Alloysius University, Ganesha N Sharma, Executive Director of BNI Mangalore, Padmanbhachar. K. IOFS, CVO-NMPA, Satish Gujaran, an Indian ultra-marathon runner, among others, were present on the occasion.

Senior officers of the port



NMPA chairman Dr AV Ramana unveils the jersy of the Golden Jubilee 10k run, in Mangaluru on Monday| EXPRESS

and members of the fitness and running communities of Mangalore also participated in the event. The event brought together the spirit of legacy and the energy of wellness in one powerful platform.

The launch included the unveiling of the official event logo, a high-energy promotional film, a specially curated route video and the event website for registrations and updates.

The Run, having 3 categories - 10K,5k, 3k Run, scheduled on 31st Aug from 6 am onwards, aims to unite the people of coastal Karnataka in a celebration of health, fitness, and community participation, while also paying homage to the contribution of NMPA in regional and national development over the past five decades.

As part of the launch ceremony, several prominent individuals and institutions who have significantly contributed to the running and wellness ecosystem in Mangaluru were felicitated, a gesture that reinforces the commitment to building a culture of active living.

Speaking on the occasion, the Chairman of NMPA emphasised that the Golden Jubilee 10K Run is not merely a fitness event but a symbolic beginning to a year of reflection, gratitude, and growth. Highlighting the Port's remarkable journey from a modest cargo handling of 1 lakh tonnes in 1974 to over 46 million tonnes today, he shared the Port's vision to touch 50 million tonnes by FY 2025-26, along with a projected Profit After Tax of Rs 550 crore.

Reaffirming NMPA's commitment to inclusive growth, he stressed that the prosperity of the Port is interlinked with the development of the local ecosystem, including MRPL, MCF, and other key industries.

The Chairman concluded by aligning the Port's vision with the national goal of transforming India into a $60 trillion economy by 2047, reiterating NMPA's resolve to contribute through efficiency, innovation, and community-centric initiatives.

The event is being executed by Sports Reconnect, a leading sports management company and is presented by NMPA and other stakeholders, added the release.

Prajavani 05-08-2025

ಟಿ-ಶರ್ಟ್, ಲಾಂಛನ, ಪ್ರಚಾರ ವಿಡಿಯೊ ಬಿಡುಗಡೆ: ವಿವಿಧ ಕಡೆಯ 3000 ಓಟಗಾರರು ಪಾಲ್ಗೊಳ್ಳುವ ನಿರೀಕ್ಷೆ

# ಎನ್‌ಎಂಪಿಎ 10ಕೆ 'ಚಿನ್ನದ' ಓಟಕ್ಕೆ ಸಿದ್ಧತೆ ಆರಂಭ

ಪ್ರಜಾವಾಣಿ ವಾರ್ತೆ

ಮಂಗಳೂರು: ನವಮಂಗಳೂರು ಬಂದರು ನಿಗಮದ (ಎನ್‌ಎಂಪಿಎ) ಸುವರ್ಣ ಸಂಭ್ರಮದ ಅಂಗವಾಗಿ ಆಯೋಜಿಸಿರುವ 10ಕೆ ಓಟದ ಸ್ಪರ್ಧೆ ಇದೇ 31ರಂದು ನಡೆಯಲಿದ್ದು ಸ್ಪರ್ಧೆಯ ಟಿ-ಶರ್ಟ್, ಲಾಂಛನ ಮತ್ತು ವಿಡಿಯೊವನ್ನು ಸೋಮವಾರ ನಡೆದ ಅದ್ದೂರಿ ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು.

ಮಂಗಳೂರು ರನ್ನರ್ಸ್ ಕ್ಲಬ್ ಮತ್ತು ಬಿಎನ್‌ಐ ಸಹಯೋಗದಲ್ಲಿ ನಡೆಯುವ ಓಟ ಬೆಳಿಗ್ಗೆ 6 ಗಂಟೆಗೆ ಆರಂಭವಾಗಲಿದ್ದು ಸ್ಪರ್ಧೆಯಲ್ಲಿ ವಿವಿಧ ವಯೋಮಾನದವರಿಗೆ 5ಕೆ ಮತ್ತು 3ಕೆ ಓಟವೂ ಇದೆ. ಮೂರೂ ಸ್ಪರ್ಧೆಗಳು ಪಣಂಬೂರು ಬೀಚ್‌ನಲ್ಲಿ ಆರಂಭಗೊಂಡು ಅಲ್ಲೇ ಮುಕ್ತಾಯಗೊಳ್ಳಲಿವೆ ಎಂದು ಆಯೋಜನಾ ಸಮಿತಿಯ ಸೌರವ್ ಘೋಷ್ ತಿಳಿಸಿದರು.

ಟಿ-ಶರ್ಟ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಎನ್‌ಎಂಪಿಎ ಅಧ್ಯಕ್ಷ ಎ.ವಿ ರಮಣ 'ಸುವರ್ಣ ಮಹೋತ್ಸವದ ಪ್ರಮುಖ ಕಾರ್ಯಕ್ರಮ 10ಕೆ ಓಟವಾಗಿದ್ದು ಈ ಮೂಲಕ ಫಿಟ್‌ನೆಸ್ ಸಂದೇಶವನ್ನು ಸಾರುವುದರೊಂದಿಗೆ ಎನ್‌ಎಂಪಿಎಗೆ ಸಮಾಜ ನೀಡಿರುವ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸುವ ಕಾರ್ಯವನ್ನೂ ಮಾಡಲಿದೆ. ಇಲ್ಲಿಂದ ಸಂಸ್ಥೆ ಅಭಿವೃದ್ಧಿಯ ಮತ್ತೊಂದು ಹೆಜ್ಜೆ ಇರಿಸಲಿದೆ ಎಂದು ಹೇಳಿದರು.

ಎನ್‌ಎಂಪಿಎಯ ಆರಂಭದ ಕಾಲದಲ್ಲಿ ಒಂದು ಲಕ್ಷ ಟನ್ ಸರಕು ಸಾಗಣೆ ಆಗುತ್ತಿತ್ತು, ಅದು ಇಗ 46 ಮಿಲಿಯ ಟನ್‌ಗೆ ಏರಿದ್ದು ಮುಂದಿನ ಆರ್ಥಿಕ ವರ್ಷದಲ್ಲಿ 50 ಮಿಲಿಯ ಟನ್‌ಗೆ ತಲುಪುವ ನಿರೀಕ್ಷೆ ಇದೆ. ಈ ಮೂಲಕ ₹ 550 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ಈಗ ಸಂಸ್ಥೆ ಆದಾಯ ₹ 450 ಕೋಟಿ ಇದೆ ಎಂದರು.

₹ 6471 ಕೋಟಿ ಮೊತ್ತದ ಕಸ್ಟಮ್ಸ್ ಡ್ಯೂಟಿ ಮತ್ತು ₹ 5 ಸಾವಿರ ಕೋಟಿ ಮೊತ್ತಕ್ಕೂ ಹೆಚ್ಚಿನ ಜಿಎಸ್‌ಟಿ ಪಾವತಿಸುತ್ತಿದೆ. ಸಂಸ್ಥೆಯ ಸಾಮಾಜಿಕ ಬದ್ಧತೆಯ ಭಾಗವಾಗಿ ನಿರ್ಮಿಸಿರುವ ಸುಸಜ್ಜಿತ ಆಸ್ಪತ್ರೆ ಈ ತಿಂಗಳಾಂತ್ಯದಲ್ಲಿ ಆರಂಭವಾಗಲಿದೆ. ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಿರುವ ಈ ಆಸ್ಪತ್ರೆಗೆ ₹ 350 ಕೋಟಿ ವ್ಯಯಿಸಲಾಗಿದೆ ಎಂದು ವಿವರಿಸಿದರು.

ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಶ್ಯಾಮಪ್ರಸಾದ್ ಕಾಮತ್, ಎನ್‌ಎಂಪಿಎ ಉಪಾಧ್ಯಕ್ಷೆ ಎಸ್. ಶಾಂತಿ, ಶ್ರೀನಿವಾಸ ವಿಶ್ವವಿದ್ಯಾಲಯದ ಉಪಕುಲಪತಿ ಎ.ಶ್ರೀನಿವಾಸ ರಾವ್, ಸೇಂಟ್ ಅಲೋಶಿಯಸ್ ವಿಶ್ವವಿದ್ಯಾಲಯದ ಕುಲಪತಿ ಫಾದರ್ ಪ್ರವೀಣ್ ಮಾರ್ಟಿಸ್, ಬಿಎನ್‌ಐ ಮಂಗಳೂರು ಘಟಕದ ಕಾರ್ಯನಿರ್ವಾಹಕ ನಿರ್ದೇಶಕ ಗಣೇಶ ಶರ್ಮ, ಎನ್‌ಎಂಪಿಎ ಮುಖ್ಯ ವಿಚಕ್ಷಣಾ ಅಧಿಕಾರಿ ಪದ್ಮನಾಭಾಚಾರ್, ಓಟದ ರಾಯಭಾರಿ, ಮ್ಯಾರಥಾನ್ ಓಟಗಾರ ಸತೀಶ್ ಗುಜರನ್ ಪಾಲ್ಗೊಂಡಿದ್ದರು.




ಎನ್‌ಎಂಪಿಎ ಸುವರ್ಣ ಸಂಭ್ರಮದ ಅಂಗವಾಗಿ ನಡೆಯಲಿರುವ 10ಕೆ ಓಟದ ಸ್ಪರ್ಧೆಯ ಟಿ-ಶರ್ಟ್ ಸೋಮವಾರ ಬಿಡುಗಡೆ ಮಾಡಲಾಯಿತು. ಪದ್ಮನಾಭಾಚಾರ್, ಎ.ವಿ ರಮಣ, ಫಾದರ್ ಪ್ರವೀಣ್ ಮಾರ್ಟಿಸ್ ಹಾಗೂ ಗಣೇಶ ಶರ್ಮ ಪಾಲ್ಗೊಂಡಿದ್ದರು

## ಧೂಮಪಾನ ಬಿಡಲು ಓಟ ಆರಂಭ



ಸತೀಶ್ ಗುಜರನ್

ದಕ್ಷಿಣ ಆಫ್ರಿಕಾದಲ್ಲಿ ನಡೆಯುವ ಅಪರೂಪದ ಮತ್ತು ಐತಿಹಾಸಿಕ ಕಾಮ್ರೇಡ್ಸ್ ಮ್ಯಾರಥಾನ್‌ನಲ್ಲಿ 14 ಬಾರಿ ಪಾಲ್ಗೊಂಡಿರುವ ಸತೀಶ್ ಗುಜರನ್ ಮಾತನಾಡಿ, ಧೂಮಪಾನದ ಚಟದಿಂದ ಮುಕ್ತವಾಗಲು ಶುರು ಮಾಡಿದ ಓಟ ಈಗ ಹವ್ಯಾಸ ಮತ್ತು ವೃತ್ತಿಯಾಗಿ ಪರಿಣಮಿಸಿದೆ ಎಂದರು.

60 ವರ್ಷ ದಾಟಿರುವ ಸತೀಶ್ ಅವರು ಜನಿಸಿದ್ದು ಉಡುಪಿ ಜಿಲ್ಲೆಯ ಕಟಪಾಡಿಯಲ್ಲಿ. ಉಡುಪಿ, ಬೆಂಗಳೂರು ಮತ್ತು ಮುಂಬೈಯಲ್ಲಿ ಶಿಕ್ಷಣ ಪಡೆದಿರುವ ಅವರು ಈಗ ಮುಂಬೈಯಲ್ಲೇ ನೆಲೆಸಿದ್ದಾರೆ. 'ಆರಂಭದಲ್ಲಿ 1 ಕಿಮೀ ಓಡಲು ಆಗುತ್ತಿರಲಿಲ್ಲ. ಅಭ್ಯಾಸ ಮಾಡುತ್ತ ಈಗ 90 ಕಿಮೀ ವರೆಗೂ ಓಡಲು ಸಮರ್ಥನಾಗಿದ್ದೇನೆ. ಕಾಮ್ರೇಡ್ಸ್ ಓಟಕ್ಕೆ ಈಗ 100 ವರ್ಷ ತುಂಬಿದೆ. 2010ರ ಸಂದರ್ಭದಲ್ಲಿ ಭಾರತದಿಂದ ಕೆಲವೇ ಮಂದಿ ಪಾಲ್ಗೊಳ್ಳುತ್ತಿದ್ದರು. ಈಗ ಆ ಸಂಖ್ಯೆ 425ಕ್ಕೆ ಏರಿದೆ. ಈ ವರ್ಷದ ಓಟಕ್ಕೆ ಸಾವಿರ ಮಂದಿಯನ್ನು ಕರೆದುಕೊಂಡು ಹೋಗುವ ಗುರಿ ಇದೆ. ಶಿಕ್ಷಣದ ಕುರಿತು ಜಾಗೃತಿ ಮೂಡಿಸಲು ಮುಂಬೈಯಿಂದ ಸೂರತ್ ಹಾಗೂ ಮುಂಬೈಯಿಂದ ಶಿರಡಿ ವರೆಗೆ ಓಡಿದ್ದೇನೆ ಎಂದು ಅವರು ತಿಳಿಸಿದರು.

Udayavani 05-08-2025

# ಅಲೋಶಿಯಸ್ ಪದವಿ ಪೂರ್ವ ಕಾಲೇಜು: ನಾಯಕತ್ವ ಕಾರ್ಯಾಗಾರ



**ಮಹಾನಗರ, ಆ.4:** ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜಿನಲ್ಲಿವಿದ್ಯಾರ್ಥಿ ಮಂತ್ರಿಮಂಡಲದ ಸದಸ್ಯರು ಹಾಗೂ ಪ್ರಥಮ ಮತ್ತು ದ್ವಿತೀಯ ವರ್ಷದ ತರಗತಿ ಪ್ರತಿನಿಧಿಗಳಿಗೆ ನಾಯಕತ್ವದ ಕುರಿತಾದ ಕಾರ್ಯಾಗಾರ ಕಾಲೇಜಿನ ಸಭಾಂಗಣದಲ್ಲಿ ಇತ್ತೀಚೆಗೆ ಜರಗಿತು.

ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ|ಮೋನಾ ಮೆಂಡೋನ್ಸಾ ಮಾತನಾಡಿ, ನಾಯಕ ಎಂದರೆ ಕಾಲಾನಂತರದಲ್ಲಿ ವಿಕಸನಗೊಳ್ಳುವ ವ್ಯಕ್ತಿ. ಸವಾಲುಗಳು ರೂಪಾಂತರಕ್ಕೆ ಸಾಧನಗಳಾಗಿ ಕಾರ್ಯನಿರ್ವಹಿಸುತ್ತವೆ ನಮ್ರತೆ, ಸ್ವಯಂ ಅರಿವು, ಸಹಾನುಭೂತಿ ಮತ್ತು ಮುಕ್ತ ಮನಸ್ಸು ಇವುಗಳು ನಾಯಕತ್ವಕ್ಕೆ ಅಗತ್ಯವಾದ ನಾಲ್ಕು ಮೌಲ್ಯಗಳಾಗಿದ್ದು ವಿದ್ಯಾರ್ಥಿ ನಾಯಕರು ಯಾವಾಗಲೂ ಹೆಚ್ಚುವರಿಯಾಗಿ ಸಾಗಲು, ತಮ್ಮನ್ನು ತಾವು ಹೊಣೆಗಾರರನ್ನಾಗಿ ಮಾಡಿಕೊಳ್ಳಲು ಮತ್ತು ಅಗತ್ಯವಿದ್ದಾಗ ಕ್ಷಮೆಯಾಚಿಸಲು ಸಿದ್ಧರಾಗಿರಬೇಕು. ನಿಜವಾದ ನಾಯಕ ವಿನಮ್ರನಾಗಿದ್ದು ಯಾವಾಗಲೂ ಇತರರ ಜೊತೆ ಹೆಜ್ಜೆ ಹಾಕಲು ಸಿದ್ಧನಾಗಿರಬೇಕು ಎಂದರು.

ವಿದ್ಯಾರ್ಥಿ ಮಂತ್ರಿಮಂಡಲದ ಅಭಿರಾಮ್ ಮುರಳೀಧರ್ ಸ್ವಾಗತಿಸಿದರು. ಜತೆ ಕಾರ್ಯದರ್ಶಿ ವೈಷ್ಣವಿ ಹೆಗ್ಡೆ ನೇತೃತ್ವ ವಹಿಸಿದ್ದರು ಕಾರ್ಯದರ್ಶಿ ಗೋರ್ಡನ್ ವಿಲ್ಫ್ರೆಡ್ ಸಾಲ್ಡೋ ವಂದಿಸಿದರು.

Hosadigantha 13-08-2025

ಮಂಗಳೂರಿನಲ್ಲಿ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರದರ್ಶನ ಉದ್ಘಾಟನೆ | ಡಾ. ಮಹಾಲಿಂಗ ಭಟ್ ಅಭಿಮತ

# ಸಾಹಿತ್ಯದ ಶಕ್ತಿಗೆ ಬೇರೆ ಯಾವುದೇ ಪರ್ಯಾಯ ಇಲ್ಲ



ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರದರ್ಶನವನ್ನು ಡಾ. ಮಹಾಲಿಂಗ ಭಟ್ ಅವರು ಉದ್ಘಾಟಿಸಿದರು.

**ಮಂಗಳೂರು:** ವಿಶ್ವದಾದ್ಯಂತ ದೇಶವೊಂದಕ್ಕೆ ಒಂದೇ ಭಾಷೆಯಿರುವಾಗ ಭಾರತ ಭೂಖಂಡದಲ್ಲಿ ಸಾವಿರಾರು ಭಾಷೆ - ಸಾಹಿತ್ಯ - ಸಂಸ್ಕೃತಿಗಳಿಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಪುಸ್ತಕ ಮಾತ್ರವಲ್ಲ ಮೌಖಿಕ ಸಾಹಿತ್ಯವೂ ಇದೆ. 24 ಭಾಷೆಗಳಲ್ಲಿನ ಉತ್ತಮ ಸಾಹಿತ್ಯ ಗುರುತಿಸಿ ಪ್ರಕಟಿಸುವುದು, ಒಂದು ಭಾಷೆಯಿಂದ ಇನ್ನೊಂದಕ್ಕೆ ಅನುವಾದ ಮಾಡಿ ಪ್ರಕಟಿಸುವುದು ಸುಲಭದ ಕೆಲಸವಲ್ಲ. ಕೇಂದ್ರ ಸಾಹಿತ್ಯ ಅಕಾಡೆಮಿಯು ಇದನ್ನು ಹಲವಾರು ದಶಕಗಳಿಂದ ಮಾಡುತ್ತಿದೆ. ಭಾರತೀಯ ಸಾಹಿತ್ಯದ ನಿರ್ಮಾತೃರು ಎಂಬ ಸರಣಿ ಪುಸ್ತಕಗಳನ್ನು ಓದಿದರೆ ಕಾಲಮಾನದ ಆಚೆಗಿನ ಸಾಮಾಜಿಕ ಪರಿಸ್ಥಿತಿಗಳನ್ನು ಯೋಚಿಸಲು ಸಾಧ್ಯವಾಗುತ್ತದೆ. ಸಾಹಿತ್ಯದ ಶಕ್ತಿಗೆ ಬೇರೆ ಪರ್ಯಾಯ ಇಲ್ಲ ಎಂದು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಭಾಷಾ ನಿಕಾಯದ ಮುಖ್ಯಸ್ಥ ಡಾ. ಮಹಾಲಿಂಗ ಭಟ್ ಅಭಿಪ್ರಾಯಪಟ್ಟರು.

ಕೊಂಕಣಿ ಸಾಹಿತಿ ವಿ.ಜೆ.ಪಿ. ಸಲ್ದಾನ್ಹಾ ಜನ್ಮಶತಾಬ್ದಿಯ ಸಲುವಾಗಿ ಸಾಹಿತ್ಯ ಅಕಾಡೆಮಿ ಹೊಸದಿಲ್ಲಿ, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕೊಂಕಣಿ ಸಂಸ್ಥೆ, ವಿಶನ್ ಕೊಂಕಣಿ ಹಮ್ಮಿಕೊಂಡಿರುವ ಎರಡು ದಿನದ ರಾಷ್ಟ್ರೀಯ ವಿಚಾರ ಸಂಕಿರಣದ ಅಂಗವಾಗಿ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ಆಯೋಜಿಸಿರುವ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ಸಾಹಿತ್ಯ ಅಕಾಡೆಮಿ ಹೊಸದೆಹಲಿ ಕೊಂಕಣಿ ಭಾಷಾ ಸಮಿತಿಯ ಮುಖ್ಯಸ್ಥ ಕವಿ ಮೆಲ್ವಿನ್ ರೊಡ್ರಿಗಸ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಭಾಷಾ ಸಲಹಾ ಸಮಿತಿ ಸದಸ್ಯ ಎಚ್. ಎಂ. ಪೆರ್ನಾಲ್ ನಿರೂಪಿಸಿ, ವಂದಿಸಿದರು. ಸಾಹಿತ್ಯ ಅಕಾಡೆಮಿ ಬೆಂಗಳೂರು ಪ್ರಾದೇಶಿಕ ಸಮಿತಿಯ ರಂಗನಾಥ್, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಕೊಂಕಣಿ ಸಂಸ್ಥೆ ಕಾರ್ಯಕ್ರಮ ಸಂಯೋಜಕ ಜೋಕಿಮ್ ಪಿಂಟೊ, ಕೇಂದ್ರ ಸಾಹಿತ್ಯ ಅಕಾಡೆಮಿ ಭಾಷಾ ಸಲಹಾ ಸಮಿತಿ ಸದಸ್ಯ ಸ್ಟ್ಯಾನಿ ಬೇಳ ಉಪಸ್ಥಿತರಿದ್ದರು.

ಆ. 12ರಿಂದ 14 ರವರೆಗೆ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ಪುಸ್ತಕ ಪ್ರದರ್ಶನ ಮತ್ತು ಮಾರಾಟ ನಡೆಯಲಿದ್ದು, ವಿಶೇಷ ರಿಯಾಯಿತಿ ದರದಲ್ಲಿ ಪುಸ್ತಕಗಳು ಮಾರಾಟಕ್ಕಿವೆ. ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆ, ಸಂಘ - ಸಂಸ್ಥೆಗಳ ಗ್ರಂಥಾಲಯಗಳಿಗೆ ವಿಶೇಷ ರಿಯಾಯಿತಿ ಇದೆ. ಕನ್ನಡ, ಕೊಂಕಣಿ, ಮಲಯಾಳಂ, ಇಂಗ್ಲಿಷ್, ಹಿಂದಿ, ಮರಾಠಿ ಸೇರಿದಂತೆ ಆರು ಭಾಷೆಗಳ 350ಕ್ಕೂ ಹೆಚ್ಚು ಟೈಟಲ್‌ಗಳು ಮಾರಾಟಕ್ಕಿವೆ.

Varthabharati 13-08-2025

# ಮಂಗಳೂರು: 3 ದಿನಗಳ ಸಾಹಿತ್ಯ ಅಕಾಡಮಿ ಪುಸ್ತಕ ಪ್ರದರ್ಶನಕ್ಕೆ ಚಾಲನೆ



ಮಂಗಳೂರು, ಆ.12: ಸಾಹಿತ್ಯಕ್ಕೆ ಪರ್ಯಾಯ ಶಕ್ತಿ ಇನ್ನೊಂದಿಲ್ಲ ಎಂದು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಭಾಷಾ ನಿಕಾಯದ ಮುಖ್ಯಸ್ಥ ಪ್ರೊ.ಡಾ.ಮಹಾಲಿಂಗ ಭಟ್ ಅಭಿಪ್ರಾಯಪಟ್ಟಿದ್ದಾರೆ.

ಕೊಂಕಣಿ ಸಾಹಿತಿ ವಿ.ಜೆ.ಪಿ. ಸಲ್ದಾನ ಜನ್ಮ ಶತಾಬ್ದಿಯ ಅಂಗವಾಗಿ ಹೊಸದಿಲ್ಲಿ ಸಾಹಿತ್ಯ ಅಕಾಡಮಿ, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕೊಂಕಣಿ ಸಂಸ್ಥೆ ವಿಶನ್ ಕೊಂಕಣಿ ಆ.13-14ರಂದು ಹಮ್ಮಿಕೊಂಡಿರುವ ರಾಷ್ಟ್ರೀಯ ವಿಚಾರ ಸಂಕಿರಣದ ಅಂಗವಾಗಿ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ಆಯೋಜಿಸಿರುವ ಮೂರು ದಿನಗಳ ಸಾಹಿತ್ಯ ಅಕಾಡಮಿ ಪುಸ್ತಕ ಪ್ರದರ್ಶನವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

24 ಭಾಷೆಗಳಲ್ಲಿನ ಉತ್ತಮ ಸಾಹಿತ್ಯ ಗುರುತಿಸಿ ಪ್ರಕಟಿಸುವುದು, ಒಂದು ಭಾಷೆಯಿಂದ ಇನ್ನೊಂದಕ್ಕೆ ಅನುವಾದ ಮಾಡಿ ಪ್ರಕಟಿಸುವುದು ಸುಲಭದ ಕೆಲಸವಲ್ಲ. ಕೇಂದ್ರ ಸಾಹಿತ್ಯ ಅಕಾಡಮಿಯು ಇದನ್ನು ಹಲವಾರು ದಶಕಗಳಿಂದ ಮಾಡುತ್ತಾ ಬಂದಿದೆ. ಭಾರತೀಯ ಸಾಹಿತ್ಯದ ನಿರ್ಮಾತೃರು ಎಂಬ ಸರಣಿ ಪುಸ್ತಕಗಳನ್ನು ಓದಿದರೆ ಕಾಲಮಾನದ ಆಚೆಗಿನ ಸಾಮಾಜಿಕ ಪರಿಸ್ಥಿತಿಗಳನ್ನು ಯೋಚಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಾಹಿತ್ಯ ಅಕಾಡಮಿ, ದಿಲ್ಲಿಯ ಕೊಂಕಣಿ ಭಾಷಾ ಸಮಿತಿಯ ಮುಖ್ಯಸ್ಥ ಕವಿ ಮೆಲ್ವಿನ್ ರೊಡ್ರಿಗಸ್, ಕೇಂದ್ರ ಸಾಹಿತ್ಯ ಅಕಾಡಮಿ ವಿಶ್ವದ ಅತಿದೊಡ್ಡ ಸಾಹಿತ್ಯ ಸಂಸ್ಥೆಯಾಗಿದೆ. ಸಾಹಿತ್ಯ ಅಕಾಡಮಿಯಿಂದ 19 ಗಂಟೆಗೆ ಒಂದು ಪುಸ್ತಕ ಹೊರಬರುತ್ತದೆ ಎಂದರು.

ಸಾಹಿತ್ಯ ಅಕಾಡಮಿ ಬೆಂಗಳೂರು ಪ್ರಾದೇಶಿಕ ಸಮಿತಿಯ ರಂಗನಾಥ್, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ, ಕೊಂಕಣಿ ಸಂಸ್ಥೆ ಕಾರ್ಯಕ್ರಮ ಸಂಯೋಜಕ ಜೋಕಿಂ ಪಿಂಟೊ, ಕೇಂದ್ರ ಸಾಹಿತ್ಯ ಅಕಾಡಮಿ ಭಾಷಾ ಸಲಹಾ ಸಮಿತಿಯ ಸದಸ್ಯ ಸ್ಟ್ಯಾನಿ ಬೇಳ ಉಪಸ್ಥಿತರಿದ್ದರು.

ಭಾಷಾ ಸಲಹಾ ಸಮಿತಿ ಸದಸ್ಯ ಎಚ್.ಎಂ. ಪೆರ್ನಾಲ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

★**ಪುಸ್ತಕ ಪ್ರದರ್ಶನ ಮಾರಾಟ:** ಆ.12ರಿಂದ 14ರವರೆಗೆ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಪುಸ್ತಕ ಪ್ರದರ್ಶನ-ಮಾರಾಟ ನಡೆಯಲಿದ್ದು, ವಿಶೇಷ ರಿಯಾಯಿತಿ ದರದಲ್ಲಿ ಪುಸ್ತಕಗಳು ಮಾರಾಟಕ್ಕಿವೆ. ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆ, ಸಂಘ-ಸಂಸ್ಥೆಗಳ ಗ್ರಂಥಾಲಯಗಳಿಗೆ ವಿಶೇಷ ರಿಯಾಯಿತಿ ಇದೆ ಎಂದು ಪ್ರಕಟನೆ ತಿಳಿಸಿದೆ.

Samyukta Karnataka 14-08-2025

# ಸಾಹಿತ್ಯಕ್ಕೆ ಪರ್ಯಾಯ ಶಕ್ತಿ ಇನ್ನೊಂದಿಲ್ಲ: ಮಹಾಲಿಂಗ

## ರಾಷ್ಟ್ರೀಯ ವಿಚಾರ ಸಂಕಿರಣ, ಪುಸ್ತಕ ಪ್ರದರ್ಶನ

**ಮಂಗಳೂರು:** ಸಾಹಿತ್ಯಕ್ಕೆ ಪರ್ಯಾಯ ಶಕ್ತಿ ಇನ್ನೊಂದಿಲ್ಲ ಎಂದು ಸಂತ ಅಲೋಶಿಯಸ್ ಪರಿಗಣಿತ ವಿಶ್ವ ವಿದ್ಯಾನಿಲಯದ ಭಾಷಾ ನಿಖಾಯದ ಮುಖ್ಯಸ್ಥ ಪ್ರೊ.ಡಾ.ಮಹಾಲಿಂಗ ಭಟ್ ಅಭಿಪ್ರಾಯಪಟ್ಟಿದ್ದಾರೆ.

ಕೊಂಕಣಿ ಸಾಹಿತಿ ವಿ.ಜೆ.ಪಿ.ಸಲ್ಡಾನ ಜನ್ಮಶತಾಬ್ದಿಯ ಅಂಗವಾಗಿ ಹೊಸದಿಲ್ಲಿ ಸಾಹಿತ್ಯ ಅಕಾಡಮಿ, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕೊಂಕಣಿ ಸಂಸ್ಥೆ ವಿಶನ್ ಕೊಂಕಣಿ ಆ.13-14ರಂದು ಹಮ್ಮಿಕೊಂಡಿರುವ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಪ್ರಯುಕ್ತ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ಆಯೋಜಿಸಿರುವ ಮೂರು ದಿನಗಳ ಸಾಹಿತ್ಯ ಅಕಾಡಮಿ ಪುಸ್ತಕ ಪ್ರದರ್ಶನವನ್ನು ಸೋಮವಾರ ಉದ್ಘಾಟಿಸಿ ಮಾತನಾಡುತ್ತಿದ್ದರು.

24 ಭಾಷೆಗಳಲ್ಲಿನ ಉತ್ತಮ ಸಾಹಿತ್ಯ ಗುರುತಿಸಿ ಪ್ರಕಟಿಸುವುದು, ಒಂದು ಭಾಷೆಯಿಂದ ಇನ್ನೊಂದಕ್ಕೆ ಅನುವಾದ ಮಾಡಿ ಪ್ರಕಟಿಸುವುದು ಸುಲಭದ ಕೆಲಸವಲ್ಲ. ಕೇಂದ್ರ ಸಾಹಿತ್ಯ ಅಕಾಡಮಿಯು ಇದನ್ನು ಹಲವಾರು ದಶಕಗಳಿಂದ ಮಾಡುತ್ತಾ ಬಂದಿದೆ. ಭಾರತೀಯ ಸಾಹಿತ್ಯದ ನಿರ್ಮಾತೃರು ಎಂಬ ಸರಣಿ ಪುಸ್ತಕಗಳನ್ನು ಓದಿದರೆ ಕಾಲಮಾನದ ಆಚೆಗಿನ ಸಾಮಾಜಿಕ ಪರಿಸ್ಥಿತಿಗಳನ್ನು ಯೋಚಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಸಾಹಿತ್ಯ ಅಕಾಡಮಿ ಬೆಂಗಳೂರು ಪ್ರಾದೇಶಿಕ ಸಮಿತಿಯ ರಂಗನಾಥ್, ಜೋಕಿಮ್ ಪಿಂಟೊ, ಸ್ಟ್ಯಾನಿ ಬೇಳ ಉಪಸ್ಥಿತರಿದ್ದರು. ಎಚ್.ಎಂ. ಪೆರ್ನಾಲ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



Udayavani 15-08-025

# ಸಾಹಿತ್ಯದ ಶಕ್ತಿಗೆ ಪರ್ಯಾಯವಿಲ್ಲ: ಡಾ| ಮಹಾಲಿಂಗ ಭಟ್



**ಮಹಾನಗರ, ಆ. 14:** ವಿಶ್ವಾದ್ಯಂತ ದೇಶವೊಂದಕ್ಕೆ ಒಂದೇ ಭಾಷೆಯಿರುವಾಗ ಭಾರತ ಭೂಖಂಡದಲ್ಲಿ ಸಾವಿರಾರು ಭಾಷೆ - ಸಾಹಿತ್ಯ - ಸಂಸ್ಕೃತಿಗಳಿಗೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ ಎಂದು ಅಲೋಶಿಯಸ್ ಪರಿಗಣಿತ ವಿ.ವಿ.ಯ ಭಾಷಾ ನಿಲಯದ ಮುಖ್ಯಸ್ಥ ಡಾ| ಮಹಾಲಿಂಗ ಭಟ್ ಅಭಿಪ್ರಾಯಪಟ್ಟರು.

ಕೊಂಕಣಿ ಸಾಹಿತಿ ವಿಜೆಪಿ ಸಲ್ಡಾನ್ಹಾ ಜನ್ಮಶತಾಬ್ದಿಸಲುವಾಗಿ ಸಾಹಿತ್ಯ ಅಕಾಡೆಮಿ, ಹೊಸದಿಲ್ಲಿ, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲ ಯದ ಕೊಂಕಣಿ ಸಂಸ್ಥೆ ವಿಶನ್ ಕೊಂಕಣಿ ಹಮ್ಮಿಕೊಂಡಿರುವ 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಅಂಗವಾಗಿ ಸಂತ ಅಲೋಶಿಯಸ್ ಕಾಲೇಜಿನ ಸಹೋದಯ ಸಭಾಂಗಣದಲ್ಲಿ ಆಯೋಜಿಸಿದ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತ್ಯ ಅಕಾಡೆಮಿ, ಹೊಸದಿಲ್ಲಿ ಕೊಂಕಣಿ ಭಾಷಾ ಸಮಿತಿಯ ಮುಖ್ಯಸ್ಥ ಕವಿ ಮೆಲ್ವಿನ್ ರೊಡ್ರಿಗಸ್ ಪ್ರಸ್ತಾವಿಸಿದರು. ಭಾಷಾ ಸಲಹಾ ಸಮಿತಿ ಸದಸ್ಯ ಎಚ್. ಎಂ. ಪೆರ್ನಾಲ್ ನಿರೂಪಿಸಿ, ವಂದಿಸಿದರು. ಸಾಹಿತ್ಯ ಅಕಾಡೆಮಿ ಬೆಂಗಳೂರು ಪ್ರಾದೇಶಿಕ ಸಮಿತಿಯ ರಂಗನಾಥ್, ಸಂತ ಅಲೋಶಿಯಸ್ ಪರಿಗಣಿತ ವಿ.ವಿ., ಕೊಂಕಣಿ ಸಂಸ್ಥೆ ಕಾರ್ಯಕ್ರಮ ಸಂಯೋಜಕ ಜೋಕಿಮ್ ಪಿಂಟೊ, ಕೇಂದ್ರ ಸಾಹಿತ್ಯ ಅಕಾಡೆಮಿ ಭಾಷಾ ಸಲಹಾ ಸಮಿತಿ ಸದಸ್ಯ ಸ್ಟ್ಯಾನಿ ಬೇಳ ಉಪಸ್ಥಿತರಿದ್ದರು.

Varthabharathi 14-08-2025

# ಜನ್ಮ ಶತಮಾನೋತ್ಸವ ರಾ. ವಿಚಾರ ಸಂಕಿರಣಕ್ಕೆ ಚಾಲನೆ

# ವಿಜೆಪಿ ಸಲ್ಡಾನ ಸಾಹಿತ್ಯಗಳಲ್ಲಿ ಜನರ ನೋವು ಬಿಂಬಿತವಾಗಿವೆ

## ಡಾ.ಶ್ರೀನಿವಾಸ್ ರಾವ್



ಮಂಗಳೂರು, ಆ.13: ಕೊಂಕಣಿ ಸಾಹಿತಿ ವಿಜೆಪಿ ಸಲ್ಡಾನ ಕೊಂಕಣಿ ಭಾಷೆ ಮತ್ತು ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಅವರ ಸಾಹಿತ್ಯ ಕೃತಿಗಳಲ್ಲಿ ಜನರ ನೋವು ಪ್ರತಿಬಿಂಬಿತವಾಗಿವೆ ಹೊಸದಿಲ್ಲಿಯ ಕೇಂದ್ರ ಸಾಹಿತ್ಯ ಅಕಾಡಮಿಯ ಕಾರ್ಯದರ್ಶಿ ಡಾ.ಕೆ.ಶ್ರೀನಿವಾಸ್ ರಾವ್ ಹೇಳಿದ್ದಾರೆ.

ಖ್ಯಾತ ಕೊಂಕಣಿ ಬರಹಗಾರ ವಿಜೆಪಿ ಸಲ್ಡಾನರ ಜನ್ಮ ಶತಮಾನೋತ್ಸವದ ಸ್ಮರಣಾರ್ಥ ಹೊಸದಿಲ್ಲಿಯ ಕೇಂದ್ರ ಸಾಹಿತ್ಯ ಅಕಾಡಮಿ, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ ಮತ್ತು ವಿಷನ್ ಕೊಂಕಣಿ ಸಹಯೋಗದೊಂದಿಗೆ ನಗರದ ಸಂತ ಅಲೋಶಿಯಸ್ ವಿವಿಯ ರಾಬರ್ಟ್ ಸಿಕ್ವೇರ ಸಭಾಂಗಣದಲ್ಲಿ ಬುಧವಾರ ಆರಂಭಗೊಂಡ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತಿದ್ದರು.

ಬಹುಮುಖ ಸಾಧಕರಾಗಿರುವ ವಿಜೆಪಿ ಕಾದಂಬರಿಕಾರರಲ್ಲದೆ, ಪತ್ರಿಕೋದ್ಯಮ, ನಾಟಕ ಮತ್ತು ಸಾಮಾಜಿಕ ರಂಗಕ್ಕೂ ಕೊಡುಗೆ ನೀಡಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂತ ಅಲೋಶಿಯಸ್ ವಿವಿ ಉಪಕುಲಪತಿ ವಂ.ಡಾ.ಪ್ರವೀಣ್ ಮಾರ್ಟಿಸ್ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಯುವ ಬರಹಗಾರರಿಗೆ ವಿಜೆಪಿ ಸಲ್ಡಾನರ ಸಾಹಿತ್ಯ ಮತ್ತು ಬರವಣಿಗೆಯ ಕೌಶಲ್ಯಗಳನ್ನು ಅರಿಯಲು ಈ ವಿಚಾರ ಸಂಕಿರಣ ಉತ್ತಮ ಅವಕಾಶ ಒದಗಿಸಿದೆ ಎಂದರು.

ಸಂಶೋಧಕ ಫಾ.ಪ್ರವೀಣ್ ಪಿಂಟೊ ದಿಕ್ಸೂಚಿ ಭಾಷಣ ಮಾಡಿದರು.

ಸಂತ ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ಫಾ.ಮೆಲ್ವಿನ್ ಜೋಸೆಫ್ ಪಿಂಟೊ ಎಸ್.ಜೆ. ಕಾರ್ಯಕ್ರಮ ಉದ್ಘಾಟಿಸಿದರು.

ಕೊಂಕಣಿ ಸಾಹಿತ್ಯ ಅಕಾಡಮಿಯ ಕೊಂಕಣಿ ಭಾಷಾ ಸಮಿತಿಯ ಮುಖ್ಯಸ್ಥ ಮೆಲ್ವಿನ್ ರೊಡ್ರಿಗಸ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕೊಂಕಣಿ ಸಂಸ್ಥೆಗಳ ಸಂಚಾಲಕ ಜೋಕಿಂ ಪಿಂಟೊ ಸ್ವಾಗತಿಸಿದರು. ಕೇಂದ್ರ ಸಾಹಿತ್ಯ ಅಕಾಡಮಿಯ ಮುಂಬೈ ಪ್ರಾದೇಶಿಕ ಕೇಂದ್ರದ ಮುಖ್ಯಸ್ಥ ಡಾ.ಓಂಪ್ರಕಾಶ್ ನಾಗರ್ ವಂದಿಸಿದರು. ಮನೋಜ್ ಫೆರ್ನಾಂಡಿಸ್ ಕಾರ್ಯಕ್ರಮ ನಿರೂಪಿಸಿದರು.

Udayavani 14-08-2025

# ವಿಜೆಪಿ ಸಲ್ಡಾನ್ಹಾ ಅವರ ಜನ್ಮ ಶತಮಾನೋತ್ಸವ: ವಿಚಾರ ಸಂಕಿರಣ



**ಮಹಾನಗರ, ಆ. 13:** ದಿಲ್ಲಿಯ ಸಾಹಿತ್ಯ ಅಕಾಡೆಮಿ, ವಿಷನ್ ಕೊಂಕಣಿ ಮತ್ತು ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಕೊಂಕಣಿ ಬರಹಗಾರ ವಿಜೆಪಿ ಸಲ್ಡಾನ್ಹಾ ಅವರ ಜನ್ಮ ಶತಮಾನೋತ್ಸವದ ಸ್ಮರಣಾರ್ಥ ಎರಡು ದಿನಗಳ ವಿಚಾರ ಸಂಕಿರಣ ಮಂಗಳೂರಿನ ಸಂತ ಅಲೋಶಿಯಸ್ ವಿ.ವಿ.ಯಲ್ಲಿ ಬುಧವಾರ ಆರಂಭವಾಯಿತು.

ಹೊಸದಿಲ್ಲಿಯ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಡಾ| ಕೆ. ಶ್ರೀನಿವಾಸ್ ರಾವ್ ಮಾತನಾಡಿ, ವಿಜೆಪಿ ಸಲ್ಡಾನ್ಹಾ ತಮ್ಮ ಕೃತಿಗಳಲ್ಲಿ ಜನರ ನೋವುಗಳನ್ನು ಪ್ರತಿಬಿಂಬಿಸಲು ಪ್ರಯತ್ನಿಸಿದ್ದಾರೆ. ಪತ್ರಿಕೋದ್ಯಮ, ನಾಟಕ, ಸಾಮಾಜಿಕ ಕಾರ್ಯಗಳ ಪ್ರತಿಪಾದಕರಾಗಿದ್ದರು ಎಂದರು.

ಸಂತ ಅಲೋಶಿಯಸ್ ವಿ.ವಿ.ಯ ಉಪಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿ ಸಲ್ಡಾನ್ಹಾ ಅವರ ಪರಂಪರೆಯ ಮಹತ್ವದ ಬಗ್ಗೆ ತಿಳಿಸಿದರು. ವಿಚಾರ ಸಂಕಿರಣವು ವಿದ್ಯಾರ್ಥಿಗಳು ಮತ್ತು ಯುವ ಬರಹಗಾರರಿಗೆ ಸಲ್ಡಾನ್ಹಾ ಅವರ ಸಾಹಿತ್ಯ ಮತ್ತು ಬರವಣಿಗೆಯ ಕೌಶಲಗಳನ್ನು ಅನ್ವೇಷಿಸಲು ಒಂದು ಸುವರ್ಣಾವಕಾಶವನ್ನು ಒದಗಿಸಿದೆ ಎಂದು ಹೇಳಿದರು.

ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ವಂ|. ಮೆಲ್ವಿನ್ ಜೋಸೆಫ್ ಪಿಂಟೊ ಕಾರ್ಯಕ್ರಮ ಉದ್ಘಾಟಿಸಿ, ಶುಭಹಾರೈಸಿದರು. ವಂ| ಪ್ರವೀಣ್ ಪಿಂಟೊ, ಮೆಲ್ವಿನ್ ರೊಡ್ರಿಗಸ್ ಮತ್ತಿತರರಿದ್ದರು.

Prajavani 14-08-2025

# ಜನರ ನೋವಿಗೆ ಧ್ವನಿಯಾಗಿದ್ದ ವಿಜೆಪಿ ಸಲ್ಡಾನ

## ಮಂಗಳೂರು: ವಿಜೆಪಿ ಸಲ್ಡಾನ ಅವರ ಜನ್ಮ ಶತಮಾನೋತ್ಸವದ ಸ್ಮರಣಾರ್ಥ ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಹಿತಿ ವಿಜೆಪಿ ಸಲ್ಡಾನ ಅವರ ಕೃತಿಗಳಲ್ಲಿ ಜನರ ನೋವು ಧಾಳಾಗಿ ಅಭಿವ್ಯಕ್ತಿಗೊಂಡಿದೆ. 1 ಲಕ್ಷ ಪುಟಗಳಿರುವ ಕೊಂಕಣಿ ಪುಟಕೋಶ ರಚಿಸುವ ಮೂಲಕ ಅವರು ಕೊಂಕಣಿ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ ಕೆ. ಶ್ರೀನಿವಾಸ ರಾವ್ ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ, ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ ಮತ್ತು ವಿಷನ್ ಕೊಂಕಣಿ ಸಹಯೋಗದಲ್ಲಿ ಕೊಂಕಣಿ ಬರಹಗಾರ ವಿಜೆಪಿ ಸಲ್ಡಾನ ಅವರ ಜನ್ಮ ಶತಮಾನೋತ್ಸವದ ಸ್ಮರಣಾರ್ಥ ನಗರದ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಬುಧವಾರದಿಂದ ಎರಡು ದಿನ ಆಯೋಜಿಸಿರುವ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಸಲ್ಡಾನ ಕೇವಲ ಕಾದಂಬರಿಕಾರರಲ್ಲ, ನಾಟಕ, ಪತ್ರಿಕೋದ್ಯಮ, ಸಾಮಾಜಿಕ ಕಳಕಳಿಯ ಬರಹಗಳಲ್ಲೂ ಅವರು ಹೆಜ್ಜೆಗುರುತು ಮೂಡಿಸಿದ್ದಾರೆ. ಇಂತಹ ಸಾಧಕ ಸಾಹಿತಿಗಳು ಯುವ ಜನರಿಗೆ ಸ್ಫೂರ್ತಿಯಾಗಬೇಕು. ಆ ಕಾರಣಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯು 24 ಭಾಷೆಗಳಲ್ಲಿ ಸಾಹಿತ್ಯ ಸಾಧನೆ ಮಾಡಿದವರನ್ನು ಗುರುತಿಸುವ, ಕಾರ್ಯಕ್ರಮಗಳಿಗೆ ಸಹಯೋಗ ನೀಡುತ್ತ ಬಂದಿದೆ ಎಂದರು. ಸೇಂಟ್ ಅಲೋಶಿಯಸ್ ವಿವಿ ಕುಲಪತಿ ಪ್ರವೀಣ್ ಮಾರ್ಟಿಸ್ ಮಾತನಾಡಿ, ಕೊಂಕಣಿ ಭಾಷೆ, ಸಾಹಿತ್ಯದ ಜೊತೆಗೆ ಮಾಧ್ಯಮ ಕ್ಷೇತ್ರಕ್ಕೆ ವಿಜೆಪಿ ಸಲ್ಡಾನ ಅವರ ಕೊಡುಗೆ ಅಪಾರ. ಅವರ ಕೃತಿಗಳಲ್ಲಿ ವ್ಯಕ್ತವಾಗಿರುವ ಸಮಾಜಮುಖಿ ಯೋಚನೆಗಳು, ಸಾಮಾಜಿಕ ಬದ್ಧತೆ ಹೊಸ ತಲೆಮಾರಿಗೆ ಪ್ರೇರಣೆಯಾಗಬೇಕು ಎಂದರು. ಫಾ. ಪ್ರವೀಣ್ ಪಿಂಟೊ, ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ಫಾ. ಮೆಲ್ವಿನ್ ಪಿಂಟೊ, ಮೆಲ್ವಿನ್ ರೋಡ್ರಿಗಸ್ ಹಾಜರಿದ್ದರು. ಓಂ ಪ್ರಕಾಶ್ ನಾಗರ್ ವಂದಿಸಿದರು.

### ಹಳ್ಳಿಗಳಲ್ಲಿ 'ಗ್ರಾಮ ಲೋಕ'

ಕೇಂದ್ರ ಸಾಹಿತ್ಯ ಅಕಾಡೆಮಿಯು ವರ್ಷಕ್ಕೆ 600ಕ್ಕೂ ಹೆಚ್ಚು ಸಾಹಿತ್ಯ ಕಾರ್ಯಕ್ರಮ, 500ಕ್ಕೂ ಅಧಿಕ ಪುಸ್ತಕ ಪ್ರಕಟಣೆ ಮಾಡುತ್ತಿದೆ. ಸಾಹಿತ್ಯ ಚಟುವಟಿಕೆಗಳು ದೊಡ್ಡ ನಗರಕ್ಕೆ ಸೀಮಿತ ಆಗಬಾರದೆಂಬ ಉದ್ದೇಶದಿಂದ 'ಗ್ರಾಮ ಲೋಕ' ಕಾರ್ಯಕ್ರಮ ರೂಪಿಸಿದೆ. ದೇಶದಲ್ಲಿ 6 ಲಕ್ಷಕ್ಕೂ ಅಧಿಕ ಹಳ್ಳಿಗಳು ಇದ್ದು, ಆಯ್ದ ಹಳ್ಳಿಗಳಲ್ಲಿ ಸಾಹಿತ್ಯ ಹಬ್ಬ, ವಿಚಾರ ಸಂಕಿರಣ, ಸಾಹಿತಿಗಳ ಪರಿಚಯ, ಕವಿತೆ ವಾಚನದಂತಹ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ರಾಜ್ಯದಲ್ಲಿ 20ರಷ್ಟು ನಡೆದಿವೆ. ಶೀಘ್ರದಲ್ಲಿ ಅಂತರರಾಷ್ಟ್ರೀಯ ಸಾಹಿತ್ಯ ಸಮ್ಮೇಳನ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಶ್ರೀನಿವಾಸ ರಾವ್ ಹೇಳಿದರು.



ಕೊಂಕಣಿ ಬರಹಗಾರ ವಿಜೆಪಿ ಸಲ್ಡಾನ ಅವರ ಜನ್ಮ ಶತಮಾನೋತ್ಸವದ ಸ್ಮರಣಾರ್ಥ ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಲಾಯಿತು

> ಕೊಂಕಣಿ ಸಾಹಿತ್ಯಕ್ಕೆ ಉಜ್ವಲ ಭವಿಷ್ಯ ಇದ್ದು, ಯುವಜನರು ಗಂಭೀರ ಬರವಣಿಗೆಯ ಬಗ್ಗೆ ಯೋಚಿಸಬೇಕು.
> **ಶ್ರೀನಿವಾಸ ರಾವ್,** ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿ

Deccan Herald 14-08-2025

# Birth centenary seminar on life and works of V J P Saldanha begins

MANGALURU, DHNS

Sahitya Akademi, New Delhi, has popularised literature by organising literary programmes in around 250 villages under its 'Gram Lok' village outreach programme, Sahitya Akademi Secretary K Sreenivasarao said on Wednesday.

We will cover 70 more villages in the next three months, he said. He was addressing the gathering during the inaugural programme of the birth centenary seminar on the life and works of V J P Saldanha (Khaddap), organised by Sahitya Akademi in collaboration with the Konkani Institute of the St Aloysius Deemed-to-be-University and Vision Konkani, on the institution premises on Wednesday.



**Floral tributes were offered to the portrait of author V J P Saldanha during his birth centenary celebrations on the premises of the St Aloysius Institution on Wednesday.**

"It has been a normal practice of conducting literary programmes in cities. But Sahitya Akademi ensured that literature went beyond cities. Reading sessions by eminent writers as well as budding littérateurs are held as a part of Gram Lok," he said.

The akademi is conducting literary programmes in 24 regional languages except publications of works, to attract the next generation towards literature.

Sreenivasarao said littérateur V J P Saldanha was a lexicon, playwright and novelist. He touched various dark chapters of history such as that of the massacre of Catholic people by Tipu Sultan. V J P Saldanha's objectives were clear while picking up a historical subject for his novels. He is not a historian but a creative writer. The readers should keep in mind the various perspectives through which history is viewed, he said. St Aloysius Deemed-to-be-University vice chancellor Fr Pravin Martis presided over the programme. He said V J P Saldanha was the Editor of the Amar Konkani magazine between 1981 and 85. "He gave voice to the voiceless. His contribution to Konkani is immense."

Sahitya Akademi, Mumbai region office in-charge Om Prakash Nagar and St Aloysius Institutions Rector Fr Melwin Joseph Pinto were present.



ST ALOYSIUS LIBRARY MANGALURU

# ಭಲೇ, ರೆಮೋನಾ!

## 20ರ ಬಾಲೆಯ 170 ತಾಸುಗಳ ನೃತ್ಯ ಸಾಹಸ

❑ಸವಿತಾ ಹೊಳ್ಳ

**ಏಳು ಲಕ್ಷದ ಹನ್ನೆರಡು ಸಾವಿರ ಸೆಕೆಂಡುಗಳು, ಹತ್ತು ಸಾವಿರದ ಇನ್ನೂರು ನಿಮಿಷಗಳು! ಅರ್ಥಾತ್, ನಿರಂತರ 170 ಗಂಟೆಗಳವರೆಗೆ ಅಂದರೆ, ಸತತ ಏಳು ದಿನಗಳ ಕಾಲ ಈಕೆಯ ಎಳೆಯ ಕಾಲುಗಳು ಎಡೆಬಿಡದೆ ನರ್ತಿಸಿದವು. ಈ ಅಪೂರ್ವ ಸಾಧನೆ ಮಾಡಿ ವಿಶ್ವದಾಖಲೆ ಬರೆದವರು ಮಂಗಳೂರಿನ ರೆಮೋನಾ ಪಿರೇರಾ.**

**ಸಾ**ಧನೆಗೆ ಎಲ್ಲೆ ಇಲ್ಲ ಎಂಬುದಕ್ಕೆ ಇಲ್ಲಿದೆ ಜ್ವಲಂತ ಸಾಕ್ಷಿ. ದಿನಕ್ಕೆ ಒಂದೈದು ಹತ್ತು ನಿಮಿಷ, ವಾರಕ್ಕೆ ಒಂದು ಗಂಟೆ ನೃತ್ಯಾಭ್ಯಾಸ ಮಾಡಿದಷ್ಟಕ್ಕೇ ಸುಸ್ತೋ ಸುಸ್ತು ಎನ್ನುವವರೇ ಹೆಚ್ಚಾಗಿರುವ ಈ ಕಾಲಘಟ್ಟದಲ್ಲಿ ಬೆಸ್ತು ಬೀಳಿಸುವ ಸಾಧನೆ ಮಾಡಿ ಗಮನ ಸೆಳೆದಿದ್ದಾರೆ ರೆಮೋನಾ. ಏಳು ದಿನಗಳ ನಿರಂತರ ನೃತ್ಯಪ್ರದರ್ಶನ ನೀಡಿ 'ಗೋಲ್ಡನ್ ಬುಕ್ ಆಫ್ ರೆಕಾರ್ಡ್' ನಲ್ಲಿ ಹೆಸರು ದಾಖಲಿಸಿಕೊಂಡಿದ್ದಾರೆ. ಈ ನೂತನ ವಿಶ್ವದಾಖಲೆ ಮಾಡಿರುವ ರೆಮೋನಾ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಅಂತಿಮ ಬಿ.ಎ. ವಿದ್ಯಾರ್ಥಿನಿ.

ಬಾಲ್ಯದಿಂದಲೂ ನೃತ್ಯದ ಬಗ್ಗೆ ಅತೀವ ಆಸಕ್ತಿ ಹೊಂದಿದ್ದ ರೆಮೋನಾ ಅವರನ್ನು ತಾಯಿ ಗ್ಲಾಡಿಸ್ ಪಿರೇರಾ ಮೂರನೆಯ ವಯಸ್ಸಿನಲ್ಲೇ ಭರತನಾಟ್ಯ ತರಗತಿಗೆ ಸೇರಿಸಿದ್ದರು. ಕ್ರಮೇಣ ಪಾಶ್ಚಾತ್ಯ ಶೈಲಿಯ ನೃತ್ಯ, ಸಮಕಾಲೀನ ನೃತ್ಯ, ಸಾಹಸ ನೃತ್ಯ ಹಾಗೂ ಯಕ್ಷಗಾನ ಹೆಜ್ಜೆಗಾರಿಕೆ ತರಬೇತಿ ಕೊಡಿಸಿದರು. ಶಾಲಾ-ಕಾಲೇಜು ಹಂತಗಳಲ್ಲಿ ಹತ್ತು -ಹಲವು ವೇದಿಕೆಗಳಲ್ಲಿ ಕಾರ್ಯಕ್ರಮ ನೀಡುತ್ತಾ ಬೆಳೆದ ರೆಮೋನಾ ಗಾಜಿನ ಚೂರುಗಳ ಮೇಲೆ, ಮೊಳೆಗಳ ಮೇಲೆ, ಮಡಕೆಯ ಮೇಲೆ ನಿಂತು ನೃತ್ಯ ಮಾಡುವುದನ್ನೂ ಕಲಿತರು.

ಈ ಎಲ್ಲಾ ಸಾಧನೆಗಳು ಅವರಿಗೆ ರಾಜ್ಯದ 'ಬಾಲಗೌರವ ಪುರಸ್ಕಾರ', ಕೇಂದ್ರದ 'ರಾಷ್ಟ್ರೀಯ ಬಾಲ ಪುರಸ್ಕಾರ' ಪ್ರಶಸ್ತಿಯನ್ನು ತಂದುಕೊಟ್ಟಿವೆ. ರಾಷ್ಟ್ರ ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ವೀಡಿಯೋ ಕಾನ್ಫರೆನ್ಸ್ ಮೂಲಕ ರೆಮೋನಾ ಜೊತೆ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ, 'ನೃತ್ಯ ಕಲಿತಿದ್ದು ನಿಮ್ಮ ಇಷ್ಟದಿಂದಲೋ, ಮನೆಯವರ ಇಚ್ಛೆಯಿಂದಲೋ' ಎಂದು ಪ್ರಶ್ನಿಸಿದ್ದರು. 'ಬಾಲ್ಯದಲ್ಲೇ ನನಗಿದ್ದ ಆಸಕ್ತಿಯನ್ನು ಗುರುತಿಸಿದ್ದ ಅಮ್ಮ ನನ್ನನ್ನು ನೃತ್ಯಶಾಲೆಗೆ ಸೇರಿಸಿದರು; ಇದು ನನ್ನ ಆಸೆಯೂ ಆಗಿತ್ತು. ಮುಂದೊಂದು ದಿನ ಭಾರತೀಯ ಸಂಸ್ಕೃತಿಯ ವೈವಿಧ್ಯ ಮತ್ತು ಶ್ರೀಮಂತಿಕೆಯನ್ನು ವಿಶ್ವದೆಲ್ಲೆಡೆ ಪಸರಿಸುವುದು ನನ್ನ ಗುರಿ' ಎಂದಿದ್ದರು.

ನೃತ್ಯದೊಂದಿಗೆ ಹೊಸದೇನನ್ನಾದರೂ ಮಾಡಬೇಕು ಎಂಬ ಅವರ ಬಾಲ್ಯದ ಕನಸಾಗಿತ್ತು. ಸೆಮಿ ಕ್ಲಾಸಿಕಲ್ ನೃತ್ಯದಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್, ಗೋಲ್ಡನ್ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲೆಗಳನ್ನು ಬರೆದಿದ್ದ ರೆಮೋನಾ ಈ ಬಾರಿ ಯಾರೂ ಮಾಡಿರದ ಸಾಧನೆಗೆ ಮುಂದಾದರು. ಅದು ಕೇವಲ ದೈಹಿಕ ಶ್ರಮದ ಪ್ರತಿಬಿಂಬವಾಗಬಾರದು, ಬದಲಾಗಿ ನಮ್ಮ ಸಂಸ್ಕೃತಿಗೆ ಹಿಡಿದ ಕೈಗನ್ನಡಿಯಾಗಬೇಕು ಎಂಬ ದೂರದೃಷ್ಟಿಯೂ ಅವರಿಗಿತ್ತು.

ಅದಕ್ಕಾಗಿ ಅವರು ದಿನದ 24 ಗಂಟೆಯೂ ಭರತನಾಟ್ಯ ಮಾಡಿ ದಾಖಲೆ ಬರೆಯುವ ಯೋಜನೆ ರೂಪಿಸಿದರು. ಅದನ್ನೇ ವಿಸ್ತರಿಸಿ ಹಿಂದಿನ 125 ಗಂಟೆಗಳ ಸುದೀರ್ಘ ದಾಖಲೆ ಮುರಿಯುವ ಪ್ರಯತ್ನಕ್ಕೆ ಮುಂದಾದರು.

### ಕಾಲೇಜಿನ ಸಭಾಂಗಣವೇ ವೇದಿಕೆ

ಕೊನೆಗೂ ಅವರ ಸಾಧನೆಗೆ ಸಂತ ಅಲೋಶಿಯಸ್ ಕಾಲೇಜಿನ ಸಭಾಂಗಣವೇ





Scanned with CamScanner

S COLLEGE
ARY
U - 575 003
0 6 AUG 2025

"ನೃತ್ಯ ಪ್ರದರ್ಶನದ ಮಧ್ಯೆ ಪ್ರತಿ ಮೂರು ಗಂಟೆಗಳಿಗೊಮ್ಮೆ ಸಿಗುತ್ತಿದ್ದ 15 ನಿಮಿಷಗಳ ವಿರಾಮದಲ್ಲಿ ರೆಮೋನಾಗೆ ಬಾಳೆಹಣ್ಣು, ಮೊಸರು, ಎಳನೀರು, ಚೆನ್ನಾಗಿ ಬೇಯಿಸಿದ ಬಿಳಿ ಅನ್ನ ನೀಡುತ್ತಿದ್ದೆವು. ಆ ಹದಿನೈದು ನಿಮಿಷಗಳಲ್ಲಿ ಐದು ನಿಮಿಷವನ್ನು ಯೋಗನಿದ್ರೆಗೆ ಮೀಸಲಿಟ್ಟಿದ್ದೆವು. ಅದು ಮಗಳಿಗೆ ತುಂಬಾ ನೆರವಾಯಿತು"



*ಸಂಭ್ರಮದ ಕ್ಷಣದಲ್ಲಿ ಗುರು ಶ್ರೀವಿದ್ಯಾ ಮುರಳೀಧರ್ ಹಾಗೂ ತಾಯಿ ಗ್ಲಾಡಿಸ್ ಪಿರೇರಾ ಜೊತೆ ರೆಮೋನಾ.*

ವೇದಿಕೆಯಾಯಿತು. ರಾತ್ರಿ -ಹಗಲೆನ್ನದೆ ನಿರಂತರ ಏಳು ದಿನಗಳ ತನಕ ನೃತ್ಯ ಪ್ರದರ್ಶನ ನೀಡುವ ಮೂಲಕ ವಿಶ್ವದಾಖಲೆ ಬರೆದರು. ಕಾಲೇಜಿನ ಶಿಕ್ಷಕರು, ನೃತ್ಯಗುರು ಶ್ರೀವಿದ್ಯಾ ಮುರಳೀಧರ್ ಹಾಗೂ ಸಹಪಾಠಿಗಳ ನಿರಂತರ ಪ್ರೋತ್ಸಾಹ ಈ ಸಾಧನೆಗೆ ನೀರೆರೆಯಿತು. ಪ್ರದರ್ಶನದ ವೇಳೆ ಪ್ರತಿ ಮೂರು ಗಂಟೆಗೊಮ್ಮೆ 15 ನಿಮಿಷಗಳ ವಿರಾಮ ಪಡೆದ ಹೊರತಾಗಿ ನಿರಂತರ ಭರತನಾಟ್ಯ ಮಾಡುತ್ತಾ ಅಪರೂಪದ ದಾಖಲೆ ಬರೆದರು.

ಭರತನಾಟ್ಯದ ವಿವಿಧ ನಡೆಗಳಾದ ಅಲರಿಪು, ಜತಿಸ್ವರ, ಶಬ್ದಂ, ವರ್ಣ, ಪದಂ, ತಿಲ್ಲಾನಗಳ ಜೊತೆಗೆ ದೇವರನಾಮಗಳಿಗೆ ಅವರ ಹೆಜ್ಜೆಗಳು ಜೀವ ಇತ್ತವು. ಗಣೇಶ ಸ್ತುತಿ, ಕೀರ್ತನೆ ಸೇರಿದಂತೆ ಒಟ್ಟು 61 ಪದ್ಯಗಳನ್ನು ಮೂರು ಗಂಟೆಗೊಂದರಂತೆ ರೆಕಾರ್ಡ್ ಮಾಡಿಕೊಂಡು ನೃತ್ಯಕ್ಕೆ ಬಳಸಿಕೊಂಡರು. ಈ ಮೂಲಕ ಅವರು ಬಾಲ್ಯದಿಂದ ಈವರೆಗೆ ಕಲಿತ ಬಹುತೇಕ ಎಲ್ಲಾ ಹಾಡುಗಳಿಗೆ ಹೆಜ್ಜೆ ಹಾಕಿದ್ದರು.

"ನೃತ್ಯ ಪ್ರದರ್ಶನದ ಮಧ್ಯೆ ಪ್ರತಿ ಮೂರು ಗಂಟೆಗಳಿಗೊಮ್ಮೆ ಸಿಗುತ್ತಿದ್ದ 15 ನಿಮಿಷಗಳ ವಿರಾಮದಲ್ಲಿ ರೆಮೋನಾಗೆ ಬಾಳೆಹಣ್ಣು, ಮೊಸರು, ಎಳನೀರು, ಚೆನ್ನಾಗಿ ಬೇಯಿಸಿದ ಬಿಳಿ ಅನ್ನ ನೀಡುತ್ತಿದ್ದೆವು. ಆ ಹದಿನೈದು ನಿಮಿಷಗಳಲ್ಲಿ ಐದು ನಿಮಿಷವನ್ನು ಯೋಗನಿದ್ರೆಗೆ ಮೀಸಲಿಟ್ಟಿದ್ದೆವು. ಅದು ಮಗಳಿಗೆ ತುಂಬಾ ನೆರವಾಯಿತು" ಎಂದಿದ್ದಾರೆ ತಾಯಿ ಗ್ಲಾಡಿಸ್ ಪಿರೇರಾ.

ಮಗಳ ಪರಿಶ್ರಮದ ಹಿಂದೆ ತಾಯಿಯ ಪ್ರಯತ್ನವೂ ಸಾಕಷ್ಟಿತ್ತು. ಮಗಳಿಗೆ ಸಿಗುತ್ತಿದ್ದ 15 ನಿಮಿಷಗಳ ವಿರಾಮದಲ್ಲಿ ಆಕೆಯ ಜೊತೆಗಿದ್ದು ಧೈರ್ಯ ತುಂಬುತ್ತಿದ್ದದ್ದು ಮಾತ್ರವಲ್ಲ, ಒಂದಷ್ಟು ಸಲಹೆ -ಸೂಚನೆಗಳನ್ನೂ ನೀಡುತ್ತಿದ್ದರು. ಪ್ರದರ್ಶನದ ಏಳೂ ದಿನಗಳ ಕಾಲ ಕಣ್ಣು ರೆಪ್ಪೆ ಮುಚ್ಚದೆ ಮಗಳನ್ನು ಕಾದಿದ್ದರು ಈ ತಾಯಿ. ವಿಶ್ರಾಂತಿಯ ಸಮಯದಲ್ಲಿ ವೈದ್ಯರ ಸಲಹೆಯೊಂದಿಗೆ ಫಿಸಿಯೋಥೆರಪಿ ಆರೈಕೆಯನ್ನೂ ಪಡೆಯಲು ನೆರವಾಗಿದ್ದರು.




## ಹಿಂದಿನ ದಾಖಲೆಗಳನ್ನು ಮುರಿದು ಮೆರೆದ ನೃತ್ಯಗಾತಿ

**ಇದಕ್ಕೂ ಮುನ್ನ ಮಹಾರಾಷ್ಟ್ರದ ಸೃಷ್ಟಿ ಸುಧೀರ್ ಜಗತಾಪ್ ಎಂಬ 16ರ ಹರೆಯದ ಬಾಲಕಿ ನಿರಂತರ 127 ಗಂಟೆ ಕಾಲ ಕಥಕ್ ನೃತ್ಯ ಪ್ರದರ್ಶಿಸಿ ಗಿನ್ನೆಸ್ ವರ್ಲ್ಡ್ ರೆಕಾರ್ಡ್‌ನಲ್ಲಿ ಹೆಸರು ದಾಖಲಿಸಿದ್ದರು. ನೇಪಾಳದ 18ರ ಹರೆಯದ ಯುವತಿ 'ಬಂದನಾ' 126 ಗಂಟೆಗಳ ಕಾಲ ನೃತ್ಯ, ಕೇರಳದ ಕಾಲಮಂಡಲಂ ವಿದ್ಯಾರ್ಥಿನಿ ಹೇಮಲತಾ ಸತತ 123 ಗಂಟೆ 15 ನಿಮಿಷಗಳ ಕಾಲ ಮೋಹಿನಿಯಾಟ್ಟಂ ನೃತ್ಯ ಪ್ರತಿಭೆ ಪ್ರದರ್ಶಿಸಿ ದಾಖಲೆ ನಿರ್ಮಿಸಿದ್ದರು. ಇದೀಗ ರೆಮೋನಾ ತಮ್ಮ 170 ತಾಸುಗಳ ನೃತ್ಯ ಪ್ರದರ್ಶನ ನೀಡುವುದರೊಂದಿಗೆ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದು ಹೊಸ ದಾಖಲೆ ಬರೆದಿದ್ದಾರೆ.**

### ಎಲ್ಲೆ ಮೀರಿದ ಸಂತಸ

"ಪದವಿ ತರಗತಿಗೆ ಪ್ರವೇಶ ಪಡೆಯುವ ವೇಳೆಗೆ ತನ್ನ ಕನಸನ್ನು ಕಾಲೇಜು ಪ್ರಾಂಶುಪಾಲರ ಜೊತೆ ರೆಮೋನಾ ಹಂಚಿಕೊಂಡಿದ್ದರು. ಆಕೆಯ ಎಲ್ಲಾ ಪ್ರಯತ್ನಗಳಿಗೆ ಜೊತೆಯಾಗುವುದಾಗಿ ಭರವಸೆ ನೀಡಿದ್ದರು. ಈ ಸಾಧನೆ ಆರಂಭಿಸಿದ ಮೊದಲ ದಿನ ಮುಗಿಯುವ ವೇಳೆಗೆ ಆಕೆಗೆ ತುಸು ಕಷ್ಟವಾಗಿತ್ತು. ಆಗ ಕಾಲೇಜು ಆಡಳಿತ ಮಂಡಳಿ ಹಾಗೂ ಆಕೆಯ ಗೆಳತಿಯರು ಜೊತೆಯಲ್ಲಿ ನಿಂತು ಪ್ರೋತ್ಸಾಹ ನೀಡಿದರು. ಅವರೂ ಹಗಲು -ರಾತ್ರಿಯೆನ್ನದೆ ನಮ್ಮ ಜೊತೆಗಿದ್ದದ್ದು ಮರೆಯಲಾಗದ ಸಂಗತಿ" ಎಂಬ ಖುಷಿ ತಾಯಿ ಗ್ಲಾಡಿಸ್ ಅವರದ್ದು

"ಪ್ರತಿನಿತ್ಯ ಐದಾರು ಗಂಟೆಗಳ ಕಾಲ ರೆಮೋನಾ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದಳು. ಬೆಳಗ್ಗೆ ಆರರಿಂದ 7-30 ಮಾತ್ರವಲ್ಲ, ಸಂಜೆ ಆರರಿಂದ ಒಂಬತ್ತು ಗಂಟೆಯ ತನಕ ಅಭ್ಯಾಸ ನಡೆಸುತ್ತಿದ್ದಳು. ಕಾಲೇಜು ಶಿಕ್ಷಣದೊಂದಿಗೆ ಭರತನಾಟ್ಯಕ್ಕೂ ಸಮಾನ ಪ್ರಾಶಸ್ತ್ಯ ನೀಡುತ್ತಿದ್ದಳು. ಯಕ್ಷಗಾನ, ಪಾಶ್ಚಾತ್ಯ, ಸಮಕಾಲೀನ ನೃತ್ಯ ಹಾಗೂ ಸಾಹಸ ನೃತ್ಯಗಳನ್ನೂ ಆಕೆ ಸಲೀಸಾಗಿ ಮಾಡಬಲ್ಲವಳು" ಎಂದು ಹೊಗಳುತ್ತಾರೆ ರೆಮೋನಾ ಗುರು ಡಾ। ಶ್ರೀವಿದ್ಯಾ.

"ಇವೆಲ್ಲವೂ ಒಂದು ಕನಸಿನಂತೆ ನಡೆದುಹೋಗಿದೆ. 170 ಗಂಟೆಗಳು 170 ನಿಮಿಷಗಳಂತೆ ಭಾಸವಾದವು. ಇದು ನನ್ನಿಂದ ಸಾಧ್ಯವೇ ಇಲ್ಲ ಎಂದುಕೊಂಡಾಗೆಲ್ಲ ಸಹಪಾಠಿಗಳು ಜೊತೆಯಲ್ಲಿದ್ದು ನಟುವಾಂಗದಿಂದ ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. ಅವರೆಲ್ಲರ ಕಣ್ಣುಗಳಲ್ಲಿದ್ದ ಖುಷಿಯನ್ನು ಕಂಡಾಗ ನನಗೆ ನೃತ್ಯ ಮುಂದುವರಿಸಲು ಪ್ರೇರಣೆ ದೊರೆಯಿತು" ಎನ್ನುತ್ತಾರೆ ರೆಮೋನಾ.

ಸದ್ಯ ಬಿಎ ಓದುತ್ತಿರುವ ರೆಮೋನಾಗೆ ಮುಂದೆ ಭರತನಾಟ್ಯದಲ್ಲೇ ಸ್ನಾತಕೋತ್ತರ ಪದವಿ ಪಡೆದು ಸಂಶೋಧನೆ ಕೈಗೊಳ್ಳುವ ಕನಸಿದೆ. ಅದರ ಹೊರತಾಗಿ ನೃತ್ಯಶಾಲೆಯೊಂದನ್ನು ತೆರೆದು, ಅಲ್ಲಿ ವಿಶೇಷ ಮಕ್ಕಳಿಗೆ ನೃತ್ಯ ಕಲಿಸಿಕೊಡುವ ಬಯಕೆಯೂ ಇದೆ. "ವಿಶೇಷ ಮಕ್ಕಳು ಕಲಿತು ತಮ್ಮದೇ ತಂಡ ಕಟ್ಟಿ ಪ್ರದರ್ಶನ ಕೊಡುವಂತಾದರೆ ನನ್ನ ಶ್ರಮ ಸಾರ್ಥಕ" ಎಂದು ಭವಿಷ್ಯದ ಕನಸಿನ ಬಗ್ಗೆ ವಿವರಿಸುತ್ತಾರೆ ರೆಮೋನಾ.

ಅಂತಿಮ ಹಂತದಲ್ಲಿ, ಅಂದರೆ, 170 ಗಂಟೆಯೊಳಗೆ ನಿರಂತರ ನೃತ್ಯ ಪ್ರದರ್ಶನದ ಬಳಿಕ ಅರ್ಧ ಗಂಟೆಯೊಳಗೆ ಭರತನಾಟ್ಯದ ಸಾಂಪ್ರದಾಯಿಕ ಉಡುಗೆ ತೊಟ್ಟು ವೇದಿಕೆ ಹತ್ತಿ 10 ನಿಮಿಷಗಳ ಕಾಲ ವೀಕ್ಷಕರು ನಿಬ್ಬೆರಗಾಗಿಸುವಂಥ ಪ್ರದರ್ಶನ ನೀಡಿದರು ರೆಮೋನಾ. ದಣಿವೇ ಇಲ್ಲದಂತೆ ಪ್ರದರ್ಶಿಸಿದ ನೃತ್ಯಕ್ಕೆ ಪ್ರೇಕ್ಷಕರ ಶಿಳ್ಳೆ, ಕರತಾಡನಗಳು ಮತ್ತಷ್ಟು ಬಲ-ಬೆಂಬಲ ನೀಡಿದವು. ರೆಮೋನಾ ಪ್ರದರ್ಶಿಸಿದ ಸುದೀರ್ಘ ನೃತ್ಯಸರಣಿ ಪ್ರೇಕ್ಷಕರ ಹೃನ್ಮನ ಸೂರೆಗೊಂಡಿದ್ದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೇ? ರೆಮೋನಾ ಈ ಕಲೆಯಲ್ಲಿ ಇನ್ನಷ್ಟು ಪ್ರಗತಿ ಕಾಣಲಿ ಎಂಬುದೇ ನಮ್ಮ ಅಭಿನಂದನಪೂರ್ವಕ ಹಾರೈಕೆ. ■



Volume 43, Issue 33

Scanned with CamScanner

# ಆಮ್ಚೊ ಸಂದೇಶ್

ಕಥೊಲಿಕ್ ಸಭೆಚೆಂ ಕೊಂಕ್ಣಿ ಮಹಿನ್ಯಾಳೆಂ ಪತ್ರ್

ಸೆವಾ, ತ್ಯಾಗ್, ಎಕ್ವಟ್ ಆಮ್ಚೊ ಧ್ಯೆಯ್ ಜಾಗೃತಿ ಆಮ್ಚೆಂ ಮಿಸಾಂವ್ **AMCHO SANDESH KONKANI MONTHLY**

**Vol.: 34 | Issue: 08 | August 2025 | Rs. 20/-**





## 170 ವೊರಾಂಚೆಂ ನಿರಂತರ್ ಭರತನಾಟ್ಯಮ್

# ರೆಮೊನಾ ಪಿರೇರಾನ್ ರಚ್ಲೊ ವಿಶ್ವದಾಕ್ಲೊ

ಹ್ಯಾ ಅಂಕ್ಯಾಚೆ ಪ್ರಾಯೋಜಕ್

**ಕಥೊಲಿಕ್ ಸಭಾ ಬಂಟ್ವಾಳ್ ವಾರಾಡೊ**

# 170 ವೊರಾಂಚೆಂ ನಿರಂತರ್ ಭರತನಾಟ್ಯಮ್

# ರೆಮೊನಾ ಪಿರೇರಾನ್ ರಚ್ಲೊ ವಿಶ್ವದಾಕ್ಲೊ

**ಆಪ್ಲ್ಯಾ 170 ವೊರಾಂಚ್ಯಾ ವಿವಿಧ್ ಪ್ರಕಾರಾಂಚ್ಯಾ ಭರತನಾಟ್ಯಮ್ ನಾಚ್ ಪ್ರದರ್ಶನಾದ್ವಾರಿಂ ಕು| ರೆಮೊನಾನ್ ಜಾಗತಿಕ್ ದಾಕ್ಲೊ ರಚ್ಲಾ. ಖುಣಾತ್ಮಕ್ ಕಾರಣಾಂಕ್ ಲಾಗೊನ್ ಮಂಗ್ಳುರ್ಚೆಂ ನಾಂವ್ ವಿದ್ರೂಪ್ ಜಾಲ್ಲ್ಯಾ ಹ್ಯಾ ಕಾಳಾರ್ ರೆಮೊನಾಚ್ಯಾ ಹ್ಯಾ ದಾಕ್ಲ್ಯಾನ್ ಹಾಂಗಾಚ್ಯಾ ಲೊಕಾಮಧೆಂ ಧನಾತ್ಮಕ್ ಸಂಚಲನ್ ಆಸಾ ಕೆಲಾಂ.**





**ಜೋಕಿಮ್ ಪಿಂಟೊ, ವಾಮಂಜೂರ್**

2025 ಜೂನ್ 21 ಸಕಾಳಿಂ 10.30ಕ್ ಸುರ್ವಾತುನ್ ಜೂನ್ 28 ದೊನ್ಪಾರಾಂ 12.15 ಪರ್ಯಾಂತ್ ನಿರಂತರ್ 170 ವೊರಾಂ 'ರಿದಮ್ ಆಫ್ ರೆಸಿಲಿಯನ್ಸ್' ಧ್ಯೇಯಾಖಾಲ್ ಭರತನಾಟ್ಯಮ್ ನಾಚ್ ಪ್ರದರ್ಶನ್ ಕೆಲ್ಲೆಂ ರೆಮೊನಾ ಇವೆಟ್ ಪಿರೇರಾ ಆಜ್ ಯುವಜಣಾಂಚೆಂ ರೋಲ್ ಮೊಡೆಲ್ ಜಾಲಾಂ.

ಹ್ಯಾ ಪ್ರದರ್ಶನಾಂತ್ ತಿಣೆ ಪುಷ್ಪಾಂಜಲಿ, ಜತಿಸ್ವರ್, ಕೌತ್ವಮ್, ಶಬ್ದಮ್, ವರ್ಣಾಂ, ಪದಮ್, ದಾಸರಪದ, ಸ್ತೋತ್ರಾಂ, ಕಾವಡಿ, ತಿಲ್ಲಾನ ಸಂಗಿಂ ಕುವೆಂಪು ರಾಮಾಯಣ, ಕೆಳದಿ ಚೆನ್ನಮ್ಮ,

ದುರ್ಗಿ ವಿಜಯಮ್ ನಾಚ್ ಪ್ರಸ್ತುತ್ ಕೆಲೆ. ಶಿವತಾಂಡವ, ಯಶೋಧಾ-ಕೃಷ್ಣ, ಕೃಷ್ಣ ಲೀಲೆ, ದುರ್ಗಾ ಚರಿತೆ ತಸಲೆ ನಾಚ್ ಪ್ರದಾನ್ ಆನಿ ಭಾವ್ ಪ್ರಧಾನ್ ನಾಚ್ ಭೋವ್‌ಚ್ ಉತ್ತೀಮ್ ಥರಾನ್ ಪ್ರೇಕ್ಷಕಾಂಚ್ಯಾ ಕಾಳ್ಜಾಂಕ್ ನಾಟ್ವಾಸಾರ್ಕೆಂ ದಿಲ್ಲೆಂ ಪ್ರದರ್ಶನ್ ಸರ್ವಾಂಚೆ ಹೊಗ್ಳಿಕೆಕ್ ಫಾವೊ ಜಾಲೆಂ.

ಹರ್ ತೀನ್ ಘಂಟ್ಯಾಕ್ ಏಕ್ ಪಾವ್ಟಿಂ 15 ಮಿನುಟಾಂಚೊ ಭೆಟ್ಟೊಳ್ ಘೆಂವ್ಕ್ ತಾಕಾ ಆವ್ಕಾಸ್ ಆಸ್‌ಲ್ಲೊ. ತ್ಯೆ ಆವ್ದೆಂತ್ ತಾಣೆ ಪೊಟಾಕ್ ಘೆಜೆ, ಕುಡಿಚೆ ನಿತಳಾಯ್ ತಿರ್ಸಿಜೆ, ವಸ್ತುರ್ ಬದ್ಲಿಜೆ ಆನಿ ವಿಶೆವ್ ಘೆಜೆ ಆಸ್‌ಲ್ಲೆಂ. ಅಸಲೆಂ ಸಾಧನ್ ಭೋವ್ ಕಟೀಣ್ ತರೀ ರೆವೊನಾಚೆ ಲಾಂಬ್ ಕಾಳಾಚೆ ತಯಾರಾಯ್, ತಿಚೆ ಆವಯ್ ಗ್ಲ್ಯಾಡಿಸ್ ಸೆಲಿನ್, ತಿಚೆ ಭರತನಾಟ್ಯಮ್ ಶಿಕ್ಷಕಿ ಸೌರಭ ಕಲಾ ಪರಿಷತ್ತಾಚೆ ದೊ। ವಿದ್ಯಾ ಮುರಳೀಧರ್ ಹಾಂಚೊ ಪ್ರೊತ್ಸಾವ್, ಸಹ-ವಿದ್ಯಾರ್ತಿಂಚೊ ಸಾಂಗಾತ್, ರೆಕ್ಟರ್ ಮೆಲ್ವಿನ್ ಜೋಸೆಫ್ ಪಿಂಟೊ ಜೆ.ಸ. ಆನಿ ಸ್ಯೆಂಟ್ ಎಲೋಶಿಯುಸ್ ಯುನಿವರ್ಸಿಟಿಚೊ ವೈಸ್‌ಚಾನ್ಸಲರ್ ದೊ। ಫಾ। ಪ್ರವೀಣ್ ಮಾರ್ಟಿಸ್ ಜೆ.ಸ. ಹಾಂಚೊ ಪಾಟಿಂಬೊ ತಾಕಾ ತಾಚೆಂ ಪಂಥಾಹ್ವಾನ್ ಯಶಸ್ವೆನ್ ಸಂಪಂವ್ಕ್ ಕಾರಣ್ ಜಾಲೊ.







## ನಾಚ್ಪಾಂತ್ ರೆಮೊನಾ ಪುರ್ವಿಲೆ ದಾಖ್ಲೆ

**ರೆಮೊನಾಚ್ಯಾಕೀ ಆದಿಂ ಭೋವ್ ಲಾಂಬ್ ಆವ್ದೆಕ್ ನಾಚ್ ನಾಚ್‌ಲ್ಲೊ ದಾಖ್ಲೊ ಕು। ಶ್ರುತಿ ಸುಧೀರ್ ಜಾಗ್‌ತಾಪ್ ಹಿಚ್ಯಾ ನಾಂವಾರ್ ಆಸಾ. 16 ವರ್ಸಾಂಚಿ ಹಿ ಚಲಿ ಮಹರಾಷ್ಟ್ರ, ಲಾತೂರ್ಚ್ಯಾ ದಯಾನಂದ ಕೊಲೆಜಿಚಿ ವಿದ್ಯಾರ್ತಿಣ್ ಜಾವ್ನಾಸ್‌ಲ್ಲಿ. ತಿಣೆ 2023, ಮೇ 29 ಥಾವ್ನ್ ಜೂನ್ 3 ಪರ್ಯಾಂತ್ ನಿರಂತರ್ 127 ವೊರಾಂ ಕಥಕ್ ನಾಚ್ ನಾಚೊನ್ ಹೊ ದಾಖ್ಲೊ ರಚ್‌ಲ್ಲೊ. ತಿಚ್ಯಾಕೀ ಆದಿಂ 2018 ಇಸ್ವೆಚ್ಯಾ ನವೆಂಬರ್ 23 ಥಾವ್ನ್ ನವೆಂಬರ್ 28 ಪರ್ಯಾಂತ್ ನೇಪಾಳ್ಚ್ಯಾ ಬಂದನಾ ನೇಪಾಳ್ ಹಿಣೆ ನಿರಂತರಿ 126 ವೊರಾಂ ನಾಚೊನ್ ದಾಖ್ಲೊ ರಚ್‌ಲ್ಲೊ ತರ್ ತಿಚ್ಯಾಕೀ ಆದಿಂ ಭೋವ್ ಚಡ್ ವೇಳ್ ನಾಚ್ ನಾಚ್‌ಲ್ಲೊ ದಾಖ್ಲೊ 37 ವರ್ಸಾಂ ಪ್ರಾಯೆಚ್ಯಾ ಕಲಾಮಂಡಲಮ್ ಹೇಮಲತಾ ಹಿಚ್ಯಾ ನಾಂವಾರ್ ಆಸ್‌ಲ್ಲೊ. ತಿ ನಿರಂತರ್ 123 ಗಂಟೆ 15 ಮಿನುಟಾಂ ಮೊಹಿನಿಯಾಟ್ಟಮ್ ಮ್ಹಳ್ಳೊ ಶಾಸ್ತ್ರೀಯ್ ನಾಚ್ ನಾಚ್‌ಲ್ಲಿ.**

‘ಪಯ್ಲ್ಯಾ ದಿಸಾಚ್ಯಾ ನಾಚಾವೆಳಿಂ ದಾಕಯಿಲ್ಲೆಂ ಕುಡಿ-ಮತಿಚೆಂ ಸಮತೋಲನ್ ನಿಮಾಣ್ಯಾ ನಾಚಾಚ್ಯಾ ನಿಮಾಣ್ಯಾ ಮೆಟಾ ಪರ್ಯಾಂತ್ ಉರವ್ನ್ ಘೆತ್‌ಲ್ಲೆಂಚ್ ವ್ಹಡ್ ಏಕ್ ಅಜ್ಯಾಪ್’ ಮ್ಹಣ್ತಾ ದೊ। ವಿದ್ಯಾ ಮುರಳೀಧರ್. ಭೋವ್ ಲ್ಹಾನ್ ಪ್ರಾಯೆರ್ ಥಾವ್ನಂಚ್ ಹ್ಯಾ ಶಿಕ್ಷಕಿಚ್ಯಾ ಹಾತಾಖಾಲ್ ನಾಚ್ ಶಿಕೊನ್ ಆಸ್‌ಲ್ಲೆಂ ರೆವೊನಾ ತಿಕಾ ‘ಮಾಂ’ ಮ್ಹಣ್‌ಚ್ ಉಲೊ ಕರ್ತಾ. ‘ಗೋಲ್ಡನ್ ಬುಕ್ ಆಫ್ ರೆಕೊರ್ಡ್ಸಾಂತ್ ಭೋವ್ ಲಾಂಬ್ ಆವ್ದೆಕ್ ಭರತನಾಟ್ಯಮ್ ನಾಚ್ ನಾಚ್‌ಲ್ಲೊ ದಾಖ್ಲೊ ರಚ್‌ಲ್ಲ್ಯಾ ರೆವೊನಾಚೆಂ ಸಾಧನ್ ಆಸ್ಚೆಂಚ್











# ರೆಮೊನಾಚ್ಯಾ ಸಾಧನಾಂಚಿ ಪಟ್ಟಿ

- ನಾಚಾಖಾತಿರ್ ಶೆಂಬರಾಂ ವಯ್ರ್ ಪುರಸ್ಕಾರ್ ಜೊಡ್‌ಲ್ಲ್ಯಾ ತಿಚೆಂ ನಾಂವ್ ಇಂಡಿಯಾ ಬುಕ್ ಆಫ್ ರೆಕೊರ್ಡ್ಸ್, ಗೊಲ್ಡನ್ ಬುಕ್ ಆಫ್ ರೆಕೊರ್ಡ್ಸ್ (ಲಂಡನ್), ಮ್ಯಾಜಿಕ್ ಬುಕ್ ಆಫ್ ರೆಕೊರ್ಡ್ಸ್ ಆನಿ ಭಾರತ್ ಬುಕ್ ಆಫ್ ವರ್ಲ್ಡ್ ರೆಕೊರ್ಡ್ಸ್ –ಹಾಂತುಂ ದಾಖಲ್ ಜಾಲಾಂ.
- ದೇಶಾಚ್ಯಾ 18 ರಾಜ್ಯಾಂನಿ ಭೋವ್ ಶ್ರೇಶ್ಟ್ ವೆದಿಂನಿ ತಿಣೆ ನಾಚ್ ಪ್ರದರ್ಶನಾಂ ದಿಲ್ಯಾಂತ್.
- 2017ವ್ಯಾ ವರ್ಸಾ ತಿಕಾ ರಾಜ್ಯೋತ್ಸವ ಪುರಸ್ಕಾರ್, 2021ವ್ಯಾ ವರ್ಸಾ ಬಾಲಗೌರವ್ ಪುರಸ್ಕಾರ್ ಲಾಬ್ಲ್ಯಾತ್.
- 2022ವ್ಯಾ ವರ್ಸಾ ಪ್ರಧಾನ್‌ಮಂತ್ರಿ ರಾಶ್ಟ್ರೀಯ್ ಪುರಸ್ಕಾರ್ ಮೆಳ್ಳೊ ಮಾತ್ರ್ ನ್ಹಯ್ ಪ್ರಧಾನಿಸಂಗಿಂ ಆನ್‌ಲೈನ್ ಸಂವಾದ್ ಕರ್‍ಚೊ ಅವ್ಕಾಸ್‌ಯಿ ಲಾಬ್‌ಲ್ಲೊ.
- ಭರತನಾಟ್ಯಮಾಂತ್ ರಾಜ್ಯ್ ಮಟ್ಟಾರ್ ಭಾಂಗ್ರಾ ಪದಕ್, ಕಲಾ ಸಂಸ್ಕೃತಿ ಸನ್ಮಾನ್, ಭರತ ನಾಟ್ಯಾ ಕಲಾಶ್ರೀ ರತ್ನ ಪುರಸ್ಕಾರ್, ಕೊರ್ನಾಕ್ ನೃತ್ಯ್ ಕಲಾ ಪುರಸ್ಕಾರ್, ರಾಶ್ಟ್ರೀಯ್ ಗೌರವ್ ಪುರಸ್ಕಾರ್, ಪ್ರೈಡ್ ಆಫ್ ಇಂಡಿಯಾ ಪುರಸ್ಕಾರ್, ನೃತ್ಯಶ್ರೀ, ನೃಪತುಂಗಾ ಪುರಸ್ಕಾರ್, ನೃತ್ಯ ಮಯೂರಿ ಪುರಸ್ಕಾರ್, ನೃತ್ಯ ಕಲಾ ಸನ್ಮಾನ್, ಬೆಸ್ಟ್ ಚೈಲ್ಡ್ ಆರ್ಟಿಸ್ಟ್ ಆವಾರ್ಡ್, ನೃತ್ಯ ಗುಣಶ್ರೀ –ಅಶೆಂ ತಿಚ್ಯಾ ಪುರಸ್ಕಾರಾಂಚಿ ಪಟ್ಟಿ ವಾಡೊನ್‌ಂಚ್ ವೆತಾ.

ನಿರಂತರ್ ಅಭ್ಯಾಸಾ ಮಾರಿಫಾತ್ ತಾಕಾ ತಾಚೆ ಕುಡಿಚೆರ್ ಆನಿ ಮತಿಚೆರ್ ಆಸ್ಚ್ಯಾ ನಿಯಂತ್ರಣಾಚೆರ್! ಸಾಮಾನ್ಯ್ ಮನ್ಶ್ಯಾಂಕ್ ಹೆಂ ಖಂಡಿತ್ ಅಸಾಧ್ಯ್' ಮ್ಹಣ್ತಾತ್ ದೊ। ವಿದ್ಯಾ.

ಜಿಣ್ಯೆಂತ್ ಕಿತೆಂಯ್ ತರೀ ಕರ್‍ನ್ ದಾಕಯ್ಜೆ. ತಶೆಂ ಕಿತೆಂಯ್ ಕರ್‍ಚೆಂ ತರ್ ಅಸಾಧ್ಯ್ ಆಸ್ಚೆಂಚ್ ಕರ್‍ನ್ ದಾಕಯ್ಜೆ ಮ್ಹಳ್ಳ್ಯಾ ಹಟಾಕ್ ಲಾಗ್‌ಲ್ಲೆಂ ರೆಮೊನಾ ಲ್ಹಾನ್ ಪ್ರಾಯೆ ಥಾವ್ನ್‌ಂಚ್ ದಾಖ್ಲೆ ರಚುನ್ ಆಯ್ಲಾಂ. ಹಾಕಾ ಲಾಗೊನ್ ಇಕ್ರಾ ವರ್ಸಾಂಚೆ ಪ್ರಾಯೆರ್‌ಚ್ ತಾಕಾ ಭರತನಾಟ್ಯಮಾಂತ್ 105 ಪ್ರಾಸ್ ಚಡಿತ್ ಪುರಸ್ಕಾರ್ ಲಾಭ್‌ಲ್ಲೆ ಖಾತಿರ್ ತಿಚೆಂ ನಾಂವ್ ಇಂಡಿಯಾ ಬುಕ್ ಆಫ್ ರೆಕೊರ್ಡ್ಸಾಂತ್ ದಾಖಲ್



ರೆಮೊನಾಚ್ಯಾ ಸಾಧನಾಕ್ ತಿಣೆ ಶಿಕ್ಚ್ಯಾ
ಸಾಂ. ಲುವಿಸ್ ಪರಿಗಣಿತ್ ಯೂನಿವರ್ಸಿಟಿಥಾವ್ನ್ ಮಾನ್–ಸನ್ಮಾನ್



# ರೆಮೊನಾಚೆಂ ಸಾಧನ್ ಸಾಂಗಾತ್ವಣಾಕ್ ಆನಿ ಮನ್ಶ್ಯಾಪಣಾಕ್ ಪ್ರೇರಣ್ ಜಾಂವ್ದಿ

–ದೊ। ಫಾ। ಪ್ರವೀಣ್ ಮಾರ್ಟಿಸ್ ಜೆ.ಸ. ವೈಸ್‌ಚಾನ್ಸಲರ್, ಸಾಂ ಲುವಿಸ್ (ಪರಿಗಣಿತ್ ವಿಶ್ವ್‌ವಿದ್ಯಾಲಯ್) ಮಂಗ್ಳುರ್

ರೆಮೊನಾಚೆಂ 170 ದಿಸಾಂಚೆಂ ಪ್ರದರ್ಶನ್ ಫಕತ್ ದೈಹಿಕ್ ಸಾಮರ್ಥ್ಯಾಚೆಂ ದಾಖಲೀಕರಣ್ ನ್ಹಂಯ್ ಬಗಾರ್ ಭರತನಾಟ್ಯಮಾಚ್ಯಾ ಗಿರೇಸ್ತ್ ಆನಿ ಕಾಳಾಚ್ಯಾ ಪ್ರಭಾವಾಕ್ ಒಳಗ್ ಜಾಯ್ನಾತ್‌ಲ್ಲ್ಯಾ ಸಂಪ್ರದಾಯಾಕ್ ದಿಲ್ಲೊ ಗೌರವ್. ಶಾಸ್ತ್ರೀಯ್ ಕಲಾ ಸಮರ್ಪಣ್ ಆನಿ ಸಂಸ್ಕೃತಿಂತ್ ಕಿತ್ಲಿ ರೊಂಬೊನ್ ಆಸಾ ಮ್ಹಳ್ಳೆಂ ಹೆಂ ದಾಕಯ್ತಾ. ಅಸಲೆ ಸಂಸ್ಕೃತೆಥಂಯ್ ಥರ್‌ಬೇದ್ ನಾ ಮ್ಹಳ್ಳ್ಯಾಕ್ ರೆಮೊನಾಚೆಂ ನಿರಂತರ್ ಭರತನಾಟ್ಯಮ್ ಪ್ರದರ್ಶನ್ ಏಕ್ ನಿದರ್ಶನ್. ಶಿಕ್ಪಾ ತಿತ್ಲೆಂಚ್ ಕಲಾ ಆನಿ ಖೆಳಾಕ್ ಪಾಟಿಂಬೊ ದಿಂವ್ಚ್ಯಾ ಸಾಂ ಲುವಿಸ್ ಶಿಕ್ಪಾ ಸಂಸ್ಥ್ಯಾಂಚ್ಯಾ 146 ವರ್ಸಾಂಚ್ಯಾ ಇತಿಹಾಸಾಂತ್‌ಚ್ ಭಾಂಗ್ರಾಳ್ಯಾ ಅಕ್ಷರಾಂನಿ ಬರಂವ್ಚೆಂ ತಸಲೆಂ ಸಾಧನ್ ಕೆಲಾಂ ಕು। ರೆಮೊನಾ ಇವೆಟ್ ಪಿರೇರಾನ್. ತಿಸ್ರ್ಯಾ ವರ್ಸಾಚೆಂ ಬಿ.ಎ. ಶಿಕಪ್ ಶಿಕ್ಚ್ಯಾ ತಿಚೆಂ ವರ್ಲ್ಡ್ ರೆಕೊರ್ಡಾಚೆಂ ಸಪಣ್ ಜ್ಯಾರಿ ಕರುಂಕ್ ತಿಚಿ ಆವಯ್, ಶಿಕ್ಷಕಿ, ತಿಚೆ ಈಶ್ಟ್–ಇಶ್ಟಿಣ್ಯೊ, ವಿಶ್ವ್‌ವಿದ್ಯಾಲಯಾಚಿ ಶಿಬಂದಿ, ವಿದ್ಯಾರ್ಥಿಂಸವೆಂ ಜಾತ್ ಕಾತ್ ಮತ್ ಲೆಕಿನಾಸ್ತಾಂ ಮಂಗ್ಳುರ್ಚ್ಯಾ ತಶೆಂ ಭಂವ್ತಿಚ್ಯಾ ಲೊಕಾನ್ ಪಾಟಿಂಬೊ ದಿಲಾ. ಕೆಎಮ್‌ಸಿ, ಯೆನೆಪೊಯಾ, ಬಂದರ್ ಆನಿ ಇಜಯ್ ಪ್ರಾಥಮಿಕ್ ಭಲಾಯ್ಕಿ ಕೇಂದ್ರ್ ತಸಲ್ಯಾ ಆಸ್ಪತ್ರೆಂನಿ ದೀಸ್ ರಾತ್ ದಾಕ್ತೆರಾಂಕ್ ರಾವವ್ನ್ ತಿಚ್ಯಾ ಭಲಾಯ್ಕೆಚೆರ್ ನಿಗಾ ದವರ್ಲ್ಯಾ. ಹೆಂ ಸರ್ವ್ ಎಕ್ವಟಿತ್ ಸಾಧನಾಕ್ ನಿದರ್ಶನ್.

ಜಾಲ್ಲೆಂ. 2022ವ್ಯಾ ವರ್ಸಾ ತಾಚೆ 16 ವರ್ಸಾಂಚ್ಯೆ ಪ್ರಾಯೆರ್ ತಾಕಾ ಪ್ರಧಾನ್ ಮಂತ್ರಿಚೊ 'ಬಾಲ್ ಪುರಸ್ಕಾರ್' ಲಾಬ್‌ಲ್ಲೊ. ಭರತನಾಟ್ಯಮ್ ಸೀನಿಯರ್ ಪರೀಕ್ಷೆಂತ್ ಡಿಸ್ಟಿಂಕ್ಷನ್ ಅಂಕಾಂಸವೆಂ ಉತ್ತೀರ್ಣ್ ಜಾವ್ನ್ 'ವಿದ್ವತ್' ಹಂತಾಚೆಂ ಶಿಕಪ್ ಜೋಡ್ನ್ ಆಸ್ಚ್ಯಾ ರೆಮೊನಾಚೆಂ, 2019 ಇಸ್ವೆಂತ್ ಚಲ್‌ಲ್ಲೆಂ ರಂಗಪ್ರವೇಶ್ ಕಾರ್ಯೆಂ ಭೋವ್‌ಚ್ ಫಾಮಾದ್ ಜಾಲ್ಲೆಂ.

ಕ್ಲಾಸಿಕಲ್ (ಭರತನಾಟ್ಯಮ್), ಸೆಮಿಕ್ಲಾಸಿಕಲ್, ಸಮಕಾಳಿಕ್,




ಹಿಪ್‌ಹೊಪ್ ನಾಟ್ಯ್ ಶಿಕೊನ್ ಆಸ್ಚೆಂ ರೆಮೊನಾ ಗ್ಲಾಸಾಚ್ಯಾ ಖೊಂಚಿ ವಯ್ರ್, ತಾಂಬ್ಯಾಚೆ ಬೊಶಿಯೆಚೆರ್, ಮಾತ್ಯೆಚ್ಯಾ ಮೊಡ್ಕೆಚೆರ್, ರುಕಾಚ್ಯಾ ರೊಲಾಚೆರ್, ಹುಲಾಹೂಪ್ ವಾಪರ್ನ್ ನಾಚ್ತಾ. ಹಾತಾಂತ್ ದಿವೊ ಘೆವ್ನ್, ಉಜ್ಯಾಚ್ಯೊ ದೊಂದಿ ಘೆವ್ನ್, ತಕ್ಲೆರ್ ಉಜ್ಯಾಚೊ ಬುಡ್ಕುಲೊ ದವರ್ನ್, ಖಿಳ್ಯಾಂಚೆರ್, ಸ್ಕೇಟಿಂಗ್ ಶೂ ಘಾಲ್ನ್, ಪಾಯಾಂಕ್ ಬಡ್ಗೊ ಬಾಂದುನ್ –ಅಶೆಂ ವೆವೆಗ್ಳ್ಯಾ ಪ್ರಕಾರಾಂಚೊ ನಾಚ್ ವೆವೆಗ್ಳ್ಯಾ ರಿತಿಂನಿ ಪ್ರದರ್ಶನ್ ಕರ್ಚೆಸವೆಂ ನಾಚ್ ನಾಚ್ತಾನಾ ತಕ್ಲೆರ್ ಬುಡ್ಕುಲೊ ದವರ್ನ್ ಚ್ಹಾ ಕರ್ತಾ!

ಆಪ್ಲ್ಯಾ 170 ವೊರಾಂಚ್ಯಾ ನಾಚ್ ಪ್ರದರ್ಶನಾಂತ್ ಕು। ರೆಮೊನಾನ್ ಭರತನಾಟ್ಯಮಾಚೆ ವಿವಿಧ್ ಪ್ರಕಾರ್ ಜಾವ್ನಾಸ್ಚೆ ಅಲೆರಿಪ್ಪು, ಜತಿಸ್ವರಮ್, ಶಬ್ದಮ್, ವರ್ಣಮ್, ಪದಮ್, ತಿಲ್ಲಾಣ, ಸೆಮಿಕ್ಲಾಸಿಕ್ ಆನಿ ಭಕ್ತಿಕ್ ಶಾಸ್ತ್ರೀಯ್ ಸಂಗೀತಾಕ್ ಸರ್ ಜಾವ್ನ್ ನಾಚ್ ನಾಚ್‌ಲ್ಲೊ. ಪಾಟ್ಲ್ಯಾ ಜಾಯ್ತ್ಯಾ ತೆಂಪಾಥಾವ್ನ್ ದಿಸಾಕ್ ಪಾಂಚ್‌ಥಾವ್ನ್ ಸ ವೊರಾಂಚೊ ಕಟೀಣ್ ಅಭ್ಯಾಸ್, ಖಣಾ–ಜೆವ್ಣಾಂತ್ ಬದ್ಲಾವಣ್ ಕರ್ನ್ ಫಕತ್ ಕೆಳಿಂ, ಧಂಯ್, ಬೊಂಡ್ಯಾ ಉದಕ್, ಉಕಡ್ನ್ ಮೊಡ್ಡಿ ಜಾಲ್ಲೆಂ ಸುರಯ್ ತಾಂದ್ಳಾಚೆಂ ಶಿತ್ ಜೇವ್ನ್ ತಯಾರಿ ಕೆಲ್ಲಿ.

ರೆಮೊನಾಚೊ ಹೊ ಜಾಗತಿಕ್ ದಾಕ್ಲೊ ಮಂಗ್ಳುರಾಕ್ ನಾಂವ್ ಹಾಡುಂಕ್ ಸಕ್ಲಾ. ಋಣಾತ್ಮಕ್ ಕಾರಣಾಂಕ್ ಲಾಗೊನ್ ಮಂಗ್ಳುರ್ಚೆಂ ನಾಂವ್ ವಿದ್ರೂಪ್ ಜಾಲ್ಲ್ಯಾ ಹ್ಯಾ ಕಾಳಾರ್ ರೆಮೊನಾಚ್ಯಾ ಹ್ಯಾ ದಾಖ್ಲ್ಯಾನ್ ಹಾಂಗಾಚ್ಯಾ ಲೊಕಾ ಮಧೆಂ ಧನಾತ್ಮಕ್ ಸಂಚಲನ್ ಆಸಾ ಕೆಲಾಂ.

## ಫುಡ್ಲೆಂ ಮಿಸಾಂವ್

ರೆಮೊನಾ ಯೆದೊಳ್‌ಚ್ ವಿಕಲಚೇತನ (ಅಪಾಂಗ್) ಭುರ್ಗ್ಯಾಂಕ್, ಅವ್ಕಾಸ್ ವಂಚಿತ್ ಭುರ್ಗ್ಯಾಂಕ್, ತಿಸ್ರ್ಯಾ ಲಿಂಗಾಚ್ಯಾಂಕ್ ನಾಚ್ ತರ್ಬೆತಿ ದಿತಾ. ಫುಡಾರಾಂತ್ ಭರತನಾಟ್ಯಮಾಂತ್ ಪಿಹೆಚ್‌ಡಿ ಕರ್ನ್ ಹೆಂಚ್ ಮಿಸಾಂವ್ ಮುಕಾರುನ್ ವ್ಹರ್ಚಿ ಆಶಾ ತಿಚಿ.

●